# ಯಾಕೋಬನ ಪತ್ರಿಕೆ

**ಗ್ರಂಥಕರ್ತ:**

ಹೊಸ ಒಡಂಬಡಿಕೆಯಲ್ಲಿ ಯಾಕೋಬನೆಂಬ ಹೆಸರುಳ್ಳವರು ಅನೇಕರಿದ್ದಾರೆ: ಯೋಹಾನನ ತಮ್ಮನು ಮತ್ತು ಮೂಲ ಅಪೊಸ್ತಲರಲ್ಲಿ ಒಬ್ಬನು (ಮತ್ತಾಯ 10:2). ಅಲ್ಫಾಯನ ಮಗ ಮೂಲ ಅಪೊಸ್ತಲರಲ್ಲಿ ಇನ್ನೊಬ್ಬನು (ಮತ್ತಾಯ 10:3), ಯೂದನ ತಂದೆ ಅಥವಾ ಸಹೋದರನು ಮೂಲ ಅಪೊಸ್ತಲರಲ್ಲಿ ಒಬ್ಬನು (ಲೂಕ 16:16 ಮತ್ತು ನೋಟ್ ನೋಡಿರಿ), ಮತ್ತು ಯೇಸು ಕ್ರಿಸ್ತನ ತಮ್ಮ (ಮತ್ತಾಯ 13:55). ಈ ಪತ್ರಿಕೆಯ ಗ್ರಂಥಕರ್ತನು ಯೆರೂಸಲೇಮಿನ ಸಭೆಯಲ್ಲಿ ನಾಯಕನಾಗಿದ್ದ (ಅಪೊ 15:13) ಯೇಸು ಕ್ರಿಸ್ತನ ತಮ್ಮ ಎಂಬದು ಸಹಜವಾದ ಆಲೋಚನೆಯಾಗಿದೆ. ಸತ್ಯವೇದದ ಪುಸ್ತಕಗಳ ಗ್ರಂಥಕರ್ತರ ಬಗ್ಗೆ ತಿಳಿಯಲು ನ್ಯಾಯಸ್ಥಾಪಕರು ಪುಸ್ತಕದ ಪರಿಚಯ ಭಾಗವನ್ನು ನೋಡಿರಿ.

**ದಿನಾಂಕ:**

ಕ್ರಿ.ಶ. 45 ಮತ್ತು 50 ರ ನಡುವೆ.

**ಧ್ಯೇಯ:**

ಒಬ್ಬನು ತನ್ನ ನಡತೆಯ ಮೂಲಕ ತನ್ನ ನಂಬಿಕೆಯನ್ನು ಸಾಬೀತುಪಡಿಸುವಂಥ ಅತ್ಯಂತ ಪ್ರಾಮುಖ್ಯವಾದ ಧ್ಯೇಯ. ಕಷ್ಟಗಳನ್ನು ಸಹಿಸಿಕೊಳ್ಳುವದು, ದೇವರ ವಾಕ್ಯಗಳಿಗೆ ವಿಧೇಯರಾಗುವದು, ಪ್ರೀತಿ ಮತ್ತು ಇತರರ ವಿಷಯದಲ್ಲಿ ಪಕ್ಷಪಾತ ಮಾಡದಿರುವದು, ಒಳ್ಳೆಯ ಕಾರ್ಯಗಳು ಮತ್ತು ಬಾಯಿಂದ ಹೊರಡುವ ಮಾತುಗಳ ಮೂಲಕ ನಿಜವಾದ ನಂಬಿಕೆಯನ್ನು ತೋರ್ಪಡಿಸಬಹುದು. 2:17 ಪ್ರಧಾನ ವಾಕ್ಯವಾಗಿದೆ.

# 1 1

**1:1** "*ಯಾಕೋಬನು*"– ಹೊಸ ಒಡಂಬಡಿಕೆಯಲ್ಲಿ ಈ ಹೆಸರಿನವರು ಅನೇಕರಿದ್ದಾರೆ (ಮತ್ತಾಯ 10:2-3; ಮಾರ್ಕ 15:40; ಲೂಕ 6:16; ಮತ್ತಾಯ 13:55). ಬಹುತೇಕವಾಗಿ ಈ ಪತ್ರಿಕೆಯನ್ನು ಯೇಸು ಕ್ರಿಸ್ತನ ಮಲಸಹೋದರನೇ ಬರೆದಿದ್ದಾನೆ ಎಂಬದು ದೃಢವಾಗಿದೆ. ಯೇಸು ಕ್ರಿಸ್ತನು ಈ ಲೋಕದಲ್ಲಿದ್ದ ಸಮಯದಲ್ಲಿ ಯಾಕೋಬನಾಗಲಿ ಅಥವಾ ಆತನ ಇನ್ನಿತರೆ ಸಹೋದರರಾಗಲಿ, ಯೇಸು ಕ್ರಿಸ್ತನೇ ದೇವಕುಮಾರನಾದ ಮೆಸ್ಸೀಯನು ಎಂದು ನಂಬಿರಲಿಲ್ಲ. ಆದರೆ ಯೇಸು ಕ್ರಿಸ್ತನ ಮರಣ ಮತ್ತು ಪುನರುತ್ಥಾನದ ನಂತರ ಅವರು ವಿಶ್ವಾಸಿಗಳಾದರು (ಅಪೊ 1:14). ನಂತರದಲ್ಲಿ ಯಾಕೋಬನು ಯೆರೂಸಲೇಮಿನ ಸಭೆಗೆ

ನಾಯಕನಾದನು (ಅಪೊ 12:17; 15:13; ಗಲಾ 1:9).

*"ಕರ್ತನು"*– ಪುನರುತ್ಥಾನನಾಗುವ ತನಕ ಆತನಲ್ಲಿ ನಂಬಿಕೆಯನ್ನೇ ಇಡದವನು ಈಗ ಆತನು ನಿಜವಾಗಿಯೂ ಯಾರು ಎಂಬದನ್ನು ತಿಳಿದುಕೊಂಡಿದ್ದಾನೆ. 2:1 ನೋಡಿರಿ.

*"ಚದರಿರುವ ಹನ್ನೆರೆಡು ಕುಲಗಳು"*– ಇಸ್ರಾಯೇಲಿನಲ್ಲಿ ಹನ್ನೆರೆಡು ಕುಲಗಳಿದ್ದವು, ಮತ್ತು "ಹನ್ನೆರೆಡು ಕುಲಗಳು" ಯೆಹೂದ್ಯ ಜನರಿಗೆ ಮತ್ತೊಂದು ಹೆಸರಾಯಿತು. ಆದರೆ ಯಾಕೋಬನು ಕ್ರೈಸ್ತರಿಗೆ ಬರೆಯುತ್ತಾ ಇದ್ದಾನೆ (2:1). ಆದ್ದರಿಂದ ಅವನು ಇಸ್ರಾಯೇಲ್ ಬಿಟ್ಟು ಬೇರೆ ದೇಶಗಳು ಹಾಗೂ ಪ್ರದೇಶಗಳಿದ್ದು ಕ್ರೈಸ್ತರಾದ ಯೆಹೂದ್ಯರಿಗೆ ಬರೆದಿದ್ದಾನೆ ಎಂದು ನಾವು ಹೇಳಬಹುದು. **2**

**1:2** *"ಅದನ್ನೆಲ್ಲಾ ಆನಂದಕರವಾದದ್ದೆಂದು ಎಣಿಸಿರಿ"*– ಕಷ್ಟಗಳನ್ನು ಎದುರಿಸುವಾಗ ನಮ್ಮ ಮನೋಭಾವನೆ ಬಹಳ ಪ್ರಾಮುಖ್ಯವಾಗಿರುತ್ತದೆ. ಅವುಗಳಿಂದ ಒಳ್ಳೆಯ ಫಲಿತಾಂಶಗಳು ಬರುತ್ತವೆ ಮತ್ತು ನಮ್ಮ ಆತ್ಮೀಕ ಜೀವಿತವನ್ನು ಅಭಿವೃದ್ಧಿಪಡಿಸಲು ದೇವರೇ ಅವುಗಳನ್ನು ಅನುಮತಿಸಿದ್ದಾನೆ ಎಂಬದು ಒಂದುವೇಳೆ ನಮಗೆ ಮನವರಿಕೆಯಾದರೆ, ಆಗ ಅದನ್ನೆಲ್ಲಾ ನಾವು ಆನಂದಕರವಾದದ್ದೆಂದು ಎಣಿಸುತ್ತೇವೆ. ಯೋಹಾನ 16:33; ರೋಮಾ 5:3-5; 2 ಕೊರಿಂಥ 8:2 ನೋಡಿರಿ. ತನ್ನ ಜನರು ಆತ್ಮೀಕರಾಗಿರಬೇಕು ಮತ್ತು ನಂಬಿಕೆಯಲ್ಲಿ ದೃಢವಾಗಿರಬೇಕು ಎಂದು ದೇವರು ಬಯಸುತ್ತಾನೆ. ನಾವು "ಪ್ರವೀಣರು ಮತ್ತು ಪರಿಪೂರ್ಣರು" –ಆಗಿರಬೇಕೆಂದು ಆತನು ಬಯಸುತ್ತಾನೆ (ಎಫೆ 4:13-15 ರೊಂದಿಗೆ ಹೋಲಿಸಿ ನೋಡಿರಿ). ಈ ಜೀವಿತದಲ್ಲಿ ನಮಗೆ ಏನೇ ಎದುರಾದರೂ ಅವುಗಳನ್ನು ತಾಳ್ಮೆಯಿಂದ ನಾವು ಸಹಿಸಿಕೊಳ್ಳಲು ಶಕ್ತರಾಗಬೇಕೆಂದು ಆತನು ಬಯಸುತ್ತಾನೆ. ಈ ಫಲಿತಾಂಶವನ್ನು ತರಲು ದೇವರು ಉಪಯೋಗಿಸಿಕೊಳ್ಳುವ ಮಾರ್ಗಗಳಲ್ಲಿ ಕಷ್ಟಗಳು ಒಂದಾಗಿವೆ. ಕೀರ್ತನೆ 66:10-12 ನೋಡಿರಿ.

*"ಕಷ್ಟಗಳು"*– ಇಲ್ಲಿನ ಗ್ರೀಕ್ ಪದದ ಅರ್ಥ ಕಷ್ಟಗಳು ಅಥವಾ ಪರಿಶೋಧನೆಗಳು ಎರಡೂ ಆಗಿವೆ. ಇಲ್ಲಿನ ಪರಿಸ್ಥಿತಿಗೆ ಕಷ್ಟಗಳು ಸೂಕ್ತವಾದ ಭಾಷಾಂತರ ಅನ್ನಿಸುತ್ತದೆ. **3**

**1:3** *"ತಿಳಿದು"*– ಇದು ಪ್ರಾಮುಖ್ಯವಾದ ಸಂಗತಿ. ಒಳ್ಳೆಯ ಫಲಿತಾಂಶವು ಬರುತ್ತದೆ ಎಂಬದನ್ನು ತಿಳಿಯುವದು ಒಳ್ಳೆಯ ಫಲಿತಾಂಶಕ್ಕೆ ಕಾರಣವಾಗುವದನ್ನು ಸಹಿಸಿಕೊಳ್ಳಲು ಸಹಾಯ ಮಾಡುತ್ತದೆ.

*"ತಾಳ್ಮೆಯಿಂದ ಸಹಿಸಿಕೊಳ್ಳುವದು"*– ಕೊಲೊ 1:11; 2 ಥೆಸ 1:4; 2 ತಿಮೊ 2:12; 3:10; ಇಬ್ರಿ 12:10; 1 ಪೇತ್ರ 2:20. ಗ್ರೀಕ್ ಭಾಷೆಯಲ್ಲಿ ತಾಳ್ಮೆಯಿಂದ ಸಹಿಸಿಕೊಳ್ಳುವದು ಒಂದೇ ಪದ, ಆದರೆ ಎರಡು ಅರ್ಥಗಳನ್ನು ಒಳಗೊಂಡಿದೆ. ಈ ಪದವನ್ನು ಉಪಯೋಗಿಸುವ ಮೂಲಕ ಏನೇ ಎದುರಾದರು ಸಹಿಸಿಕೊಳ್ಳಬೇಕು ಮತ್ತು ತಾಳ್ಮೆಯಿಂದ ಯೇಸು ಕ್ರಿಸ್ತನಲ್ಲಿ ಭರವಸೆಯಿಟ್ಟು ದೇವರ ಸೇವೆಯಲ್ಲಿ ಮುಂದುವರೆಯಬೇಕು ಎಂಬದನ್ನು ಯಾಕೋಬನು

ಕಲಿಸುತ್ತಾ ಇದ್ದಾನೆ. ಈ ಗುಣ ಇಲ್ಲದೆ ಹೋದರೆ ನಮ್ಮ ಕಷ್ಟಗಳಿಂದ ನಮಗೆ ದೊರೆಯುವಂಥ ಒಳ್ಳೆಯ ಫಲಿತಾಂಶಗಳು ದೊರೆಯುವದಿಲ್ಲ. ನಮ್ಮನ್ನು ಆತ್ಮೀಕ ಬಾಲ್ಯದಿಂದ ಹೊರಗೆ ತಂದು ದೇವರಿಗಾಗಿ ಜೀವಿಸಲು ಬೇಕಾದ ಅರ್ಹತೆಯನ್ನು ಕೊಡುವವರ ವಿಷಯದಲ್ಲಿ ನಾವು ಆನಂದಿಸಬಾರದೇ? **4**

**1:4** *"ಶಿಕ್ಷಿತರು"*– ಗ್ರೀಕ್ ಪದದ ಅರ್ಥ "ಪೂರ್ಣರು", "ಪೂರ್ಣತೆಗೆ ಯಾವ ಕೊರತೆಯೂ ಇಲ್ಲದವರು", "ಪ್ರವೀಣರು", "ಪೂರ್ಣ ಅಭಿವೃಧಿಹೊಂದಿರುವವರು" –ಇತ್ಯಾದಿ ಎಂಬದಾಗಿದೆ. **5**

**1:5** ನಾವು ಎದುರಿಸುವ ಕಷ್ಟಗಳು – ನಮ್ಮ ನಂಬಿಕೆಗಾಗುವ ಪರಿಶೋಧನೆ ಕೆಲವೊಮ್ಮೆ ನಮ್ಮನ್ನು ಗೊಂದಲಕ್ಕೆ ದೂಡುತ್ತವೆ ಮತ್ತು ಬೆರಗುಗೊಳಿಸುತ್ತವೆ. ದೇವರು ಏನು ಮಾಡುತ್ತಾ ಇದ್ದಾನೆ ಅಥವಾ ನನ್ನೊಂದಿಗೆ ಯಾಕೆ ಹೀಗೆ ನಡೆದುಕೊಳ್ಳುತ್ತಾ ಇದ್ದಾನೆ ಎಂಬದು ನಮಗೆ ಅರ್ಥವಾಗದೆ ಇರಬಹುದು. ನಮ್ಮ ಕಾರಣಗಳ ನಿಮಿತ್ತ ಕಷ್ಟಗಳು ಯಾಕೆ ನಮಗೆ ಎದುರಾಗಿವೆ ಅಥವಾ ಅವುಗಳನ್ನು ಆತ್ಮೀಕವಾಗಿ ಉಪಯೋಗಿಸಿಕೊಳ್ಳುವದು ಹೇಗೆ ಎಂಬದು ನಮಗೆ ಅರ್ಥವಾಗುವದಿಲ್ಲ. ದೇವರಿಂದ ಬರುವಂಥ ಜ್ಞಾನ ನಮಗೆ ಬೇಕು ಆಗ ಕಷ್ಟಗಳನ್ನು ಮತ್ತು ಜೀವಿತದಲ್ಲಿ ಎದುರಾಗುವ ವಿವಿಧ ರೀತಿಯ ಪರಿಸ್ಥಿತಿಗಳನ್ನು ಎದುರಿಸುವದು ಹೇಗೆ ಎಂದು ನಮಗೆ ಗೊತ್ತಾಗುತ್ತದೆ. ನಮಗಾಗಿ ಮತ್ತು ಇತರರಿಗಾಗಿ ಅದನ್ನು ದೇವರಿಂದ ಬೇಡಿಕೊಳ್ಳೋಣ. ಆತನು ಸಂತೋಷವಾಗಿ ಕೊಡುತ್ತಾನೆ – ಕೊಲೊ 1:9; 2:3; ಎಫೆ 1:17; 1 ಕೊರಿಂಥ 1:31; 2:6-10; ದಾನಿ 2:20-21; ಜ್ಞಾನೋ 1:20; 2:6; 8:1; ಕೀರ್ತನೆ 51:6; 111:10. ಯಾಕೋಬ 3:17 ರಲ್ಲಿ ಈ ಜ್ಞಾನವನ್ನು ವಿವರಿಸಿದ್ದಾನೆ.

*"ಉದಾರವಾಗಿ"*– ಮತ್ತಾಯ 7:9-11; 2 ಕೊರಿಂಥ 9:8; ಫಿಲಿಪ್ಪಿ 4:19; 1 ತಿಮೊ 6:17.

*"ಹಂಗಿಸದೆ"*– ನಾವು ದೇವರ ಎದುರು ಹೋಗುವಾಗ ಆತನು ನಮ್ಮನ್ನು ಹಂಗಿಸುವದಿಲ್ಲ; ನಾವು ಅಯೋಗ್ಯರು ಅಥವಾ ಸರಿಯಾದ ರೀತಿಯಲ್ಲಿ ಪ್ರಾರ್ಥನೆ ಮಾಡುವದಿಲ್ಲ ಎಂದು ಆತನು ನಮ್ಮನ್ನು ತಳ್ಳಿಬಿಡುವದಿಲ್ಲ. ಆತನ ಪ್ರೀತಿ ಮತ್ತು ಕೃಪೆಯನ್ನು ನೆನೆಸಿಕೊಂಡು ನಾವು ಧೈರ್ಯವಾಗಿ ಆತನ ಎದುರು ನಿಲ್ಲಬಹುದು – ಇಬ್ರಿ 4:15-16.

*"ಕೊಡುವನು"*– ಇದು ಸುಳ್ಳು ಹೇಳದಿರುವ ದೇವರ ವಾಗ್ದಾನವಾಗಿದೆ (ತೀತ 1:2). **6**

**1:6** *"ನಂಬಿಕೆಯಿಟ್ಟು ಕೇಳಿಕೊಳ್ಳಬೇಕು"*– ನಮ್ಮ ಪ್ರಾರ್ಥನೆಗಳಿಗೆ ಉತ್ತರ ಸಿಗಬೇಕಾದರೆ ಇಲ್ಲಿ ಒಂದು ವಿಷಯ ಬಹಳ ಪ್ರಾಮುಖ್ಯವಾಗಿದೆ. ಇಬ್ರಿ 11:6 ನೋಡಿರಿ. ನಂಬಿಕೆಯ ಪ್ರಾರ್ಥನೆ ಎಲ್ಲಾ ಕಾರ್ಯಗಳನ್ನು ಸಾಧ್ಯವನ್ನಾಗಿಸುತ್ತದೆ (ಮಾರ್ಕ 9:23; 11:23-24).

*"ಸಮುದ್ರದ ತೆರೆಯಂತೆ ಅಲೆಯುವದು"*, *"ಸಂದೇಹಪಡುವದು"*– ಅನುಮಾನ ಅಥವಾ ಅಪನಂಬಿಕೆಯನ್ನು ಈ ಪದಗಳು ಸೂಚಿಸುತ್ತವೆ. ಅಪನಂಬಿಕೆ ದೇವರನ್ನು ಸುಳ್ಳುಗಾರನು ಎಂದು ಕರೆಯುವದಕ್ಕೆ ಸಮಾನವಾಗಿದೆ (1 ಯೋಹಾನ 5:9-10). ಬೇರೆ ಮಾತುಗಳಲ್ಲಿ

ಹೇಳುವದಾದರೆ, ದೇವರು ತಾನು ಮಾಡುವದಾಗಿ ಹೇಳಿರುವ ಕಾರ್ಯಗಳನ್ನು ಮಾಡುವದಿಲ್ಲ ಎಂಬದಾಗಿದೆ. ಸಂದೇಹಪಡುವದು ಎಂದರೆ ಅಪನಂಬಿಕೆಯ ಕಡೆಗೆ ವಾಲುವದಾಗಿದೆ. ದೇವರ ಸ್ವಭಾವ ಮತ್ತು ವಾಗ್ದಾನಗಳಲ್ಲಿ ದೃಢವಾದ ಭರವಸೆಯಿಲ್ಲದವರಾಗಿರುವದಾಗಿದೆ. ದೇವರ ವಾಗ್ದಾನವನ್ನು ಎದುರಿಸುವಾಗ ನಂಬಿಕೆ ಹೇಳುವದೇನೆಂದರೆ "ದೇವರು ಅದನ್ನು ಮಾಡುತ್ತಾನೆ", ಅಪನಂಬಿಕೆ ಹೇಳುವದೇನೆಂದರೆ "ಆತನು ಮಾಡುವದಿಲ್ಲ", ಸಂದೇಹವು ಹೇಳುವದೇನೆಂದರೆ "ಆತನು ಮಾಡಬಹುದು ಅಥವಾ ಮಾಡದೇನೇ ಇರಬಹುದು". ಸಂದೇಹಪಡುವವನು ದೇವರು ಹಾಗೂ ದೇವರ ವಾಕ್ಯಗಳಲ್ಲಿ "ಅಸ್ಥಿರನಾಗಿಯೇ" ಇರುವನು. ಅವನು ಯಾವಾಗಲೂ ಎರಡು ದಿಕ್ಕುಗಳಿಗೆ ಸೆಳೆಯಲ್ಪಡುತ್ತಾ ಇರುತ್ತಾನೆ. ಅವನು ತನ್ನ ಆಲೋಚನೆಗಳು, ಉದ್ದೇಶಗಳು, ಗುರಿಗಳು ಅಥವಾ ದೇವರ ಚಿತ್ತದ ಕಡೆಗಿನ ಸಮರ್ಪಣೆಯಲ್ಲಿ ಸ್ಥಿರತೆಯಿಲ್ಲದವನಾಗಿ ಇರುತ್ತಾನೆ. ಅವನು ಸಂದೇಹಪಡುವದಕ್ಕೆ ಏಕೈಕ ಕಾರಣ ಅವನು ಏಕಮನಸ್ಸುಳ್ಳವನಲ್ಲ. ಕೀರ್ತನೆ 86:11 ರಲ್ಲಿ ದಾವೀದನ ಪ್ರಾರ್ಥನೆಯನ್ನು ನೋಡಿರಿ. ಒಂದಲ್ಲಾ ಒಂದು ಸಮಯದಲ್ಲಿ ಸಂದೇಹಪಡುವಂಥ ಶೋಧನೆ ವಿಶ್ವಾಸಿಗಳೆಲ್ಲರಿಗೂ ಎದುರಾಗುತ್ತದೆ. ಆ ಶೋಧನೆ ಎದುರಿಸುವದನ್ನು ಮತ್ತು ದೇವರು ಹೇಳಿರುವದನ್ನು ಖಂಡಿತವಾಗಿಯೂ ಮಾಡುತ್ತಾನೆ ಎಂಬ ಸತ್ಯದಲ್ಲಿ ವಿಶ್ರಮಿಸಿಕೊಳ್ಳುವದನ್ನು ನಾವು ಕಲಿತುಕೊಳ್ಳಬೇಕು. ಈ ವಿಷಯದಲ್ಲಿ ಅಬ್ರಹಾಮನು ನಮಗೆ ಉತ್ತಮವಾದ ಉದಾಹರಣೆಯಾಗಿದ್ದಾನೆ – ರೋಮಾ 4:18-21. ಸಂದೇಹಕ್ಕೆ ಪರಿಹಾರ ಏನು? ದೇವರ ವಾಕ್ಯ (ರೋಮಾ 10:17), ದೇವರ ವಾಗ್ದಾನಗಳು ಮತ್ತು ದೇವರ ಸ್ವಭಾವಗಳನ್ನು ಧ್ಯಾನಿಸುವದು (ಕೀರ್ತನೆ 1:2-3), ಹಾಗೂ ಆತನು ಮತ್ತು ಆತನ ಚಿತ್ತದ ಮೇಲೆ ಪೂರ್ಣ ಗಮನಹರಿಸುವದು (ರೋಮಾ 12:1-2). **9**

**1:9** *"ಹೀನ ಸ್ಥಿತಿ . . . ಉತ್ತಮ ಸ್ಥಿತಿ"*– ಭೂಲೋಕದ ಸೃಷ್ಟಿಕರ್ತನಾಗಿರುವ ದೇವರು, ಲೋಕವು ಕಡೆಗಣಿಸುವ ಬಡವರನ್ನು, ಅವಿದ್ಯಾವಂತ ವಿಶ್ವಾಸಿಗಳನ್ನು ಯೇಸು ಕ್ರಿಸ್ತನಲ್ಲಿ ಉತ್ತಮ ಸ್ಥಿತಿಗೆ ತಂದಿದ್ದಾನೆ. ಆತನು ಅವರನ್ನು ತನ್ನ ಸ್ವಂತ ಮಕ್ಕಳನ್ನಾಗಿ ಮಾಡಿದ್ದಾನೆ ಮತ್ತು ಅವರನ್ನು ಉನ್ನತವಾದ ಭವಿಷ್ಯಕ್ಕಾಗಿ ಆರಿಸಿಕೊಂಡಿದ್ದಾನೆ (ಯೋಹಾನ 1:12-13; ರೋಮಾ 8:29-30; ಎಫೆ 2:6-7). ಯೇಸು ಕ್ರಿಸ್ತನಲ್ಲಿ ಐಶ್ವರ್ಯವಂತನು ಮತ್ತು ಬಡವನು, ದಾಸನು ಮತ್ತು ಯಜಮಾನನು, ವಿದ್ಯಾವಂತನು ಮತ್ತು ಅವಿದ್ಯಾವಂತನು ಎಂಬ ಯಾವ ಬೇಧವೂ ಇಲ್ಲ (1 ಕೊರಿಂಥ 12:13; ಗಲಾ 3:28; ಕೊಲೊ 3:11). ಬಡವನಾಗಿರುವವನು ಇದನ್ನು ಅರಿತುಕೊಳ್ಳಬೇಕು ಮತ್ತು ಯೇಸು ಕ್ರಿಸ್ತನಲ್ಲಿ ತನಗಿರುವ ಉತ್ತಮವಾದ ಸ್ಥಾನದ ನಿಮಿತ್ತ ಆನಂದಿಸಬೇಕು ಹಾಗೂ ಸಂತುಷ್ಟನಾಗಿರಬೇಕು. **10**

**1:10** *"ಐಶ್ವರ್ಯವಂತನು . . . ಹೀನ ಸ್ಥಿತಿಗೆ ಬರುವನು"*– ವಿಶ್ವಾಸಿಯಾಗಿರುವ ಐಶ್ವರ್ಯವಂತನು ಬಡವನಿಗೆ ಯೇಸು ಕ್ರಿಸ್ತನಲ್ಲಿರುವ ಉತ್ತಮವಾದ ಸ್ಥಾನವನ್ನೇ, ತಾನೂ

ಹೊಂದುವನು. ಆದರೆ ಯೇಸು ಕ್ರಿಸ್ತನ ಮೂಲಕ ಅವನು ತನ್ನ ದೌರ್ಬಲ್ಯ ಹಾಗೂ ಮರಣಾವಸ್ಥೆಯನ್ನು ಕಲಿತುಕೊಂಡಿದ್ದಾನೆ (ಇದು ಅವನಿಗೆ ಮೊದಲು ಗೊತ್ತಿರಲಿಲ್ಲ). ತನ್ನನ್ನು ತಗ್ಗಿಸಿಕೊಳ್ಳುವದೇ ಉತ್ತಮ ಸ್ಥಿತಿಗೆ ನಡೆಸುವ ಮಾರ್ಗ ಎಂಬದನ್ನು ಅವನು ಈಗ ತಿಳಿದುಕೊಳ್ಳಬಹುದು (ಮತ್ತಾಯ 18:4; 23:12). ಅವನು ತನ್ನ ಪಾಪವನ್ನು ತಿಳಿದುಕೊಂಡಿದ್ದಾನೆ ಹಾಗೂ ದೇವರ ಕೃಪೆಯಿಲ್ಲದೆ ಹೋದರೆ ವರ್ತಮಾನದಲ್ಲಿ ಮತ್ತು ಭವಿಷಯದಲ್ಲಿ ಒಳ್ಳೆಯ ಕಾರ್ಯಗಳನ್ನು ಹೊಂದಲು ಆಗುವದಿಲ್ಲ ಎಂಬ ಸತ್ಯವನ್ನೂ ಕಲಿತುಕೊಳ್ಳುವನು. ಇವೆಲ್ಲವುಗಳಲ್ಲಿ ಅವನು ಆನಂದ ಮತ್ತು ಸಮಾಧಾನವನ್ನು ಕಂಡುಕೊಳ್ಳಬೇಕು. ನಮ್ಮನ್ನು ದೇವರ ಮುಂದೆ ದೀನತೆಗೆ ನಡೆಸುವ ಸತ್ಯಗಳ ವಿಷಯದಲ್ಲಿ ನಾವು ಸಂತೋಷಿಸುವವರಾಗಿರಬೇಕು. 4:6 ನೋಡಿರಿ. **11**

**1:11** ಕೀರ್ತನೆ 103:15; ಯೆಶಾಯ 40:6-8; 1 ಪೇತ್ರ 1:23-25 ರೊಂದಿಗೆ ಹೋಲಿಸಿ ನೋಡಿರಿ. **12**

**1:12** *"ಧನ್ಯನು"*– ಕೀರ್ತನೆ 1:1; 119:1; ಮತ್ತಾಯ 5:3-12 ರೊಂದಿಗೆ ಹೋಲಿಸಿ ನೋಡಿರಿ. ಕಷ್ಟಗಳು ಈಗ ಮತ್ತು ನಂತರದಲ್ಲಿ ವಿಶ್ವಾಸಿಗಳ ಹಿತಕ್ಕಾಗಿ ಕಾರ್ಯಮಾಡುತ್ತವೆ – ವ 2-4; 2 ಕೊರಿಂಥ 4:17.

*"ಜಯಮಾಲೆ"*– 2 ತಿಮೊ 4:8 ರ ನೋಟ್ಸ್ ನೋಡಿರಿ. ಹಾಗೆಯೇ 1 ಕೊರಿಂಥ 9:25; ಫಿಲಿಪ್ಪಿ 4:1; ಪ್ರಕ 3:11; 4:10 ಸಹ ನೋಡಿರಿ. "ಜೀವವೆಂಬ ಜಯಮಾಲೆ" ಮತ್ತೊಮ್ಮೆ ಪ್ರಕ 2:10 ರಲ್ಲಿ ಬರೆಯಲ್ಪಟ್ಟಿದೆ. ಅಲ್ಲಿಯೂ, ನಂಬಿಗಸ್ತರಾಗಿ ಕಷ್ಟಗಳನ್ನು ಸಹಿಸಿಕೊಳ್ಳುವವರಿಗೆ ಇದನ್ನು ವಾಗ್ದಾನ ಮಾಡಲಾಗಿದೆ; ಬೇರೆ ಮಾತುಗಳಲ್ಲಿ ಹೇಳುವದಾದರೆ, ಯಥಾರ್ಥವಾದ ನಂಬಿಕೆಯುಳ್ಳವರಾಗಿದ್ದು ತಮ್ಮ ನಂಬಿಕೆ (ಮತ್ತು ಪ್ರೀತಿಯನ್ನು) ತಾಳ್ಮೆಯಿಂದ ಸಾಬೀತುಪಡಿಸುವವರಿಗೆ ವಾಗ್ದಾನ ಮಾಡಲಾಗಿದೆ.

*"ಆತನನ್ನು ಪ್ರೀತಿಸುವವರು"*– ಇದು ಪ್ರೇರಣೆಯ ಶಕ್ತಿಯಾಗಿದ್ದು ವಿಶ್ವಾಸಿಗಳು ಕಷ್ಟಗಳ ಸಮಯದಲ್ಲಿ ತಾಳ್ಮೆಯುಳ್ಳವರಾಗಿರಲು ಸಹಾಯ ಮಾಡುತ್ತದೆ (1 ಕೊರಿಂಥ 13:6). ಈ ತಾಳ್ಮೆಯು ಅವರ ಪ್ರೀತಿಗೆ ಸಾಕ್ಷಿಯಾಗಿದೆ. **13**

**1:13** ದೇವರು ನಮ್ಮನ್ನು ಪರೀಕ್ಷಿಸುತ್ತಾನೆ ಮತ್ತು ನಿರೂಪಿಸುತ್ತಾನೆ, ಆದರೆ ಶೋಧಿಸುವದಿಲ್ಲ (ಆದಿ 22:1; ಕೀರ್ತನೆ 66:10-12). ಮತ್ತಾಯ 6:13 ರ ಪ್ರಾರ್ಥನೆಗೆ ಉತ್ತರಿಸಲು ಆತನು ಸಂತೋಷಿಸುತ್ತಾನೆ.

*"ಪಾಪ ಮಾಡುವ ಪ್ರೇರಣೆ"*– ಯಾವುದೇ ದುಷ್ಟತನ, ಯಾವುದೇ ಪಾಪ ದೇವರ ಕಡೆಗೆ ಸ್ವಲ್ಪವೂ ಆಕರ್ಷಣೆಗೊಳ್ಳುವದಿಲ್ಲ. ಆತನು ಸಂಪೂರ್ಣವಾಗಿ, ಶಾಶ್ವತವಾಗಿ ಎಲ್ಲಾ ಕೆಟ್ಟತನಗಳನ್ನು ದ್ವೇಷಿಸುತ್ತಾನೆ – ಯಾಜಕ 20:7; ಧರ್ಮೋ 12:31; ಕೀರ್ತನೆ 11:5; ಜ್ಞಾನೋ 6:16-19. **14**

**1:14** ನಾವು ದೇವರ ಹಾಗೆ ಸ್ವಾಭಾವಿಕವಾಗಿ, ಹುಟ್ಟಿನಿಂದಲೇ ಪರಿಶುದ್ಧರಲ್ಲ. ನಮ್ಮ ಹಳೆಯ ಸ್ವಭಾವವು ಅವಿಧೇಯತೆ ಮತ್ತು ಭ್ರಷ್ಟತನ. ಈ ಕಾರಣದಿಂದಲೇ ನಮ್ಮಲ್ಲಿ ಪಾಪದ ಆಕರ್ಷಣೆಯಿದೆ (ಗಲಾ 5:16-17; ರೋಮಾ 7:15-20; ಎಫೆ 4:22-24). ಸೈತಾನನು ಇದನ್ನು ಚೆನ್ನಾಗಿ ತಿಳಿದಿದ್ದಾನೆ ಆದ್ದರಿಂದ ನಮ್ಮೆದುರಿಗೆ ಅತ್ಯಂತ ಆಕರ್ಷಕ ಮತ್ತು ಶೋಧನೆ ತರುವಂಥ ಕಾರ್ಯಗಳನ್ನು ಬರಮಾಡುತ್ತಾನೆ (1 ಥೆಸ 3:5). ಒಂದುವೇಳೆ ನಾವೇನಾದರೂ ಶೋಧನೆಗೆ ಒಳಗಾದರೆ ತಪ್ಪು ನಮ್ಮದೇ ಆಗಿರುತ್ತದೆ ಮತ್ತು ಅದನ್ನು ದೇವರ ಮೇಲೆ ಹಾಕುವ ಕನಸು ನಾವು ಎಂದಿಗೂ ಕಾಣಬಾರದು. 1 ಕೊರಿಂಥ 10:13 ರೊಂದಿಗೆ ಹೋಲಿಸಿ ನೋಡಿರಿ. **15**

**1:15** ಆತ್ಮೀಕ ಮರಣ ಪಾಪದ ಅಂತಿಮ ಫಲಿತಾಂಶವಾಗಿದೆ. ಆದಿ 2:17; ರೋಮಾ 5:12; 8:6 ರೊಂದಿಗೆ ಹೋಲಿಸಿ ನೋಡಿರಿ. ಪಾಪದ ಕಾರ್ಯಗಳ ಪ್ರಾರಂಭವು ಅವರ ಆಸೆಗಳಲ್ಲಿಯೇ ಇರುತ್ತವೆ (ಆದಿ 3:6; 2 ಪೇತ್ರ 1:4; 1 ಯೋಹಾನ 2:16). ದೇವರು ಕೊಡುವ ಶಕ್ತಿಯಲ್ಲಿ ವಿಶ್ವಾಸಿಗಳು ತಮ್ಮ ಆಶಾಪಾಶಗಳ ರಣರಂಗದಲ್ಲಿ ಹೋರಾಡಬೇಕು ಮತ್ತು ಆಶಾಪಾಶಗಳಿಂದ ಪಾಪಗಳು ಎದುರಾಗುವ ಮೊದಲೇ ಜಯಗಳಿಸಬೇಕು. **16**

**1:16** *"ಮೋಸಹೋಗಬೇಡಿರಿ"*– ವ 22; 1 ಕೊರಿಂಥ 6:9; ಗಲಾ 6:7; ಎಫೆ 5:6; 1 ಯೋಹಾನ 1:8. **17**

**1:17** ದೇವರ ವರಗಳು ಒಳ್ಳೆಯವುಗಳು ಮತ್ತು ಪರಿಪೂರ್ಣವುಗಳಿಗಿಂತ ಕಡಿಮೆಯಾಗಿರುವದಿಲ್ಲ. ಅವುಗಳು ಪಾಪಗಳಿಗೆ ಒಳಗಾಗುವದಿಲ್ಲ ಅಥವಾ ಪಾಪವನ್ನು ಪ್ರಚುರಪಡಿಸುವದೂ ಇಲ್ಲ. ಒಂದುವೇಳೆ ಮಾನವರು ದೇವರ ವರಗಳನ್ನು ದೂಷಿಸಿದರೆ ಮತ್ತು ಪಾಪ ಮಾಡಲು ಅವುಗಳನ್ನು ಅವಕಾಶಗಳನ್ನಾಗಿ ಮಾಡಿಕೊಂಡರೆ, ತಪ್ಪು ಮಾನವರಲ್ಲಿರುತ್ತದೆಯೇ ಹೊರತು ದೇವರ ವರಗಳಲ್ಲಿ ಅಲ್ಲ.

*"ಸಕಲವಿಧವಾದ ಬೆಳಕಿಗೆ ಮೂಲಕಾರಣನು"*– ದೇವರು ಸೃಷ್ಟಿಕರ್ತನು ಮತ್ತು ಎಲ್ಲಾ ರೀತಿಯ ಬೆಳಕು ಕೊಡುವಾತನು – ಅಕ್ಷರಶಃ ಮತ್ತು ಆತ್ಮೀಕ (ಆದಿ 1:3,14-16; ಲೂಕ 1:78-79; ಯೋಹಾನ 1:4-5; 3:19; 2 ಕೊರಿಂಥ 4:6).

*"ವ್ಯತ್ಯಾಸದ ಸೂಚನೆ ಇಲ್ಲ"*– ಸಂಖ್ಯಾ 23:19; 1 ಸಮು 15:29; ಮಲಾಕಿ 3:6; ಇಬ್ರಿ 1:10-12; 13:8. ದೇವರು ಶಾಶ್ವತವಾಗಿ ಸಂಪೂರ್ಣನು. ಆತನು ಅಭಿವೃದ್ಧಿಯಾಗುವ ಮತ್ತು ಬೆಳೆಯುವ ಅವಶ್ಯಕತೆಯಿಲ್ಲ. ಆತನ ಸ್ವಭಾವಕ್ಕೆ ಏನನ್ನು ಸೇರಿಸಲೂ ಆಗುವದಿಲ್ಲ, ತೆಗೆದುಹಾಕಲೂ ಆಗುವದಿಲ್ಲ. **18**

**1:18** ಇಲ್ಲಿ ದೇವರು ಮಾನವನಿಗೆ ಕೊಡುವ ದೊಡ್ಡದಾದ ಹಾಗೂ ಉತ್ತಮವಾದ ವರವನ್ನು ನಾವು ನೋಡಬಹುದು.

*"ನಮ್ಮನ್ನು ಹುಟ್ಟಿಸಿದ್ದಾನೆ"*– ನಮಗೆ ಹೊಸ ಜನ್ಮವನ್ನು ಕೊಟ್ಟಿದ್ದಾನೆ, ತನ್ನ ಸ್ವಂತ

ಮಕ್ಕಳನ್ನಾಗಿ ಮಾಡಿದ್ದಾನೆ – ಯೋಹಾನ 1:12-13; 3:3-8; 1 ಪೇತ್ರ 1:23. ದೇವರು ನಮ್ಮನ್ನು ಈ ರೀತಿಯಾಗಿ ಪಾಪದಿಂದ ಮತ್ತು ಮರಣದಿಂದ ಬಿಡಿಸಿದ್ದಾನೆ (ವ 15). ನಮಗೆ ಹೊಸ ಜನ್ಮವನ್ನು ಕೊಡಲು ಆತನು ಉಪಯೋಗಿಸಿರುವ "ಸತ್ಯವಾಕ್ಯವು" ಕರ್ತನಾದ ಯೇಸು ಕ್ರಿಸ್ತನ ಸುವಾರ್ತೆಯಾಗಿದೆ.

*"ಪ್ರಥಮ ಫಲ"*– ರೋಮಾ 1:16; 1 ಕೊರಿಂಥ 15:20,23; ಪ್ರಕ 14:4. ವಿಶ್ವಾಸಿಗಳು ಮುಂಬರುವ ದೊಡ್ಡ ಸುಗ್ಗಿಯ ಈಗಿನ "ಪ್ರಥಮಫಲವಾಗಿದ್ದಾರೆ". **19-20**

**1:19-20** ನೂತನ ಜನನದ ಆಲೋಚನೆಯಿಂದ ಆ ಅನುಭವವು ನಮ್ಮ ಜೀವಿತದಲ್ಲಿ ಏನನ್ನು ಉಂಟು ಮಾಡಬೇಕು ಎಂಬ ಆಲೋಚನೆಯ ಕಡೆಗೆ ಆತನು ತಿರುಗುತ್ತಾ ಇದ್ದಾನೆ. **19**

**1:19** *"ಕಿವಿಗೊಡುವದರಲ್ಲಿ ತೀವ್ರವಾಗಿರಬೇಕು"*– ಅವನ ಮಾತಿನ ಅರ್ಥ ದೇವರ ವಾಕ್ಯವನ್ನು ಕೇಳುವದರಲ್ಲಿ ತೀವ್ರವಾಗಿರಬೇಕು ಅಥವಾ ಇತರರು ಹೇಳುವದನ್ನು ಕೇಳಿಸಿಕೊಳ್ಳುವದರಲ್ಲಿ ತೀವ್ರವಾಗಿರಬೇಕು ಎಂಬದಾಗಿರಬಹುದು.

*"ಮಾತನಾಡುವದು"*– 3:1-8; ಜ್ಞಾನೋ 10:19; 13:3; 17:28; 29:20; ಮತ್ತಾಯ 12:36-37. ಅಧಿಕವಾಗಿ ಮಾತನಾಡುವ ಜನರು ಖಂಡಿತವಾಗಿಯೂ ಉಪಯೋಗವಿಲ್ಲದ ಅಥವಾ ತಪ್ಪಾಗಿರುವ ಅಥವಾ ಕೇಡನ್ನುಂಟು ಮಾಡುವ ಮಾತುಗಳನ್ನೇ ಹೆಚ್ಚಾಗಿ ಹೇಳುತ್ತಾರೆ ಮತ್ತು ಅವರು ಕೇಳಿಸಿಕೊಳ್ಳಬೇಕಾಗಿರುವ ಮಾತುಗಳನ್ನು ಕೇಳಿಸಿಕೊಳ್ಳಲು ಆಗದವರಾಗಿರುತ್ತಾರೆ.

*"ಕೋಪಿಸುವದರಲ್ಲಿ ನಿಧಾನವಾಗಿರಬೇಕು"*– ಮತ್ತಾಯ 5:22; ಎಫೆ 4:26; ಜ್ಞಾನೋ 16:32. ಮಾನವನ ಕೋಪ, ಕೆಲವೊಮ್ಮೆ ಯುಕ್ತವಾದ ಕೋಪವಾಗಿದ್ದರೂ, ದೇವರ ನೀತಿಯನ್ನು ಎಂದಿಗೂ ಸ್ಥಾಪಿಸುವದಿಲ್ಲ ಪ್ರಚುರಪಡಿಸುವದೂ ಇಲ್ಲ. 2 ತಿಮೊ 2:24-25 ರೊಂದಿಗೆ ಹೋಲಿಸಿ ನೋಡಿರಿ. ಯಾವುದೇ ರೀತಿಯ ಕೋಪಕ್ಕಿಂತಲೂ ದೀನತೆ ಮತ್ತು ಸಾತ್ವಿಕತೆ ಹೆಚ್ಚು ಉಪಯುಕ್ತಗಳಾಗಿವೆ. **21**

**1:21** *"ತೆಗೆದುಹಾಕಿ"*– ಎಫೆ 4:22-32; 5:3-4; ಕೊಲೊ 3:5-10.

*"ಬೇರೂರಿಸುವ ವಾಕ್ಯ"*– ನಮ್ಮ ಹೃದಯದೊಳಗೆ ಬೇರೂರಿಸುವ ವಾಕ್ಯ. ಮತ್ತಾಯ 13:3-9,18-22 ರೊಂದಿಗೆ ಹೋಲಿಸಿ ನೋಡಿರಿ. ನಮ್ಮೊಳಗೆ ಬಿತ್ತಲ್ಪಟ್ಟಿರುವ ದೇವರ ವಾಕ್ಯವು ಫಲ ಕೊಡಬೇಕಾದರೆ ನಾವು ದೀನತೆಯಿಂದ, ನಂಬಿಕೆಯಿಂದ ಅದನ್ನು ಅಂಗೀಕರಿಸಿಕೊಳ್ಳಬೇಕು, ಅದಕ್ಕೆ ಅಧೀನರಾಗಬೇಕು ಮತ್ತು ಅದು ಕಾರ್ಯಮಾಡಲು ಅನುಮತಿಸಬೇಕು. ಹೃದಯದಲ್ಲಿರುವ ದೇವರ ವಾಕ್ಯಗಳಿಗೆ ಬದಲಾಯಿಸುವ ಮತ್ತು ರಕ್ಷಿಸುವ ಶಕ್ತಿಯಿದೆ. **22-24**

**1:22-24** ದೇವರ ವಾಕ್ಯಗಳ ಬೋಧನೆಗನುಸಾರ ನಡೆದುಕೊಳ್ಳದೆ ಹೋದರೆ ಅವುಗಳನ್ನು ಕೇಳಿಸಿಕೊಳ್ಳುವದರಿಂದ ಯಾವುದೇ ಪ್ರಯೋಜನವಿಲ್ಲ. ಹಾಗೆ ಸುಮ್ಮನೆ

ಕೇಳಿಸಿಕೊಳ್ಳುವದರಿಂದ ನಮ್ಮ ನ್ಯಾಯವಿಚಾರಣೆಯು ಹೆಚ್ಚಾಗುತ್ತದೆ. ಬಿತ್ತುವವನ ಸಾಮ್ಯದಲ್ಲಿ ಎಲ್ಲಾ ನಾಲ್ಕು ವರ್ಗಗಳ ಜನರು ದೇವರ ವಾಕ್ಯಗಳನ್ನು ಕೇಳಿಸಿಕೊಂಡರು (ಮತ್ತಾಯ 13:19-20,22,23) ಆದರೆ ಒಂದು ವರ್ಗದವರು ಮಾತ್ರವೇ ಫಲವನ್ನು ಕೊಟ್ಟರು. ದೇವರ ವಾಕ್ಯಗಳನ್ನು ಓದುವದು, ಕೇಳಿಸಿಕೊಳ್ಳುವದು ಮತ್ತು ಕಂಠಪಾಠ ಮಾಡುವದರಲ್ಲಿ ಯೆಹೂದ್ಯರಿಗೆ ಪ್ರಸಿದ್ಧರಾಗಿದ್ದರು, ಆದರೆ (ನಮ್ಮಲ್ಲಿ ಅನೇಕರ ಹಾಗೆ) ಕೇಳಿದಂತೆ ನಡೆದುಕೊಳ್ಳುವದರಲ್ಲಿ ಅವರು ಪ್ರಸಿದ್ಧರಾಗಿರಲಿಲ್ಲ (ಮತ್ತಾಯ 23:3; ಅಪೊ 7:53; ರೋಮಾ 2:17-24). ಮತ್ತಾಯ 7:21-27 ರಲ್ಲಿ ಯೇಸು ಕ್ರಿಸ್ತನು ತನ್ನ ಬೋಧನೆಗೆ ವಿಧೇಯರಾಗಿ ನಡೆದುಕೊಳ್ಳುವದರ ಪ್ರಾಮುಖ್ಯತೆ ತಿಳಿಸಿರುವದನ್ನು ಗಮನಿಸಿರಿ. ರಕ್ಷಣೆ ಹೊಂದಲು ಏನು ಮಾಡಬೇಕೆಂದು ದೇವರ ವಾಕ್ಯ ಹೇಳುತ್ತದೆಯೋ ಅದನ್ನು ಮಾಡದೆ ಇರುವದರಿಂದ ಕ್ರೈಸ್ತರೆಂದು ಹೇಳಿಕೊಳ್ಳುವ ಅನೇಕರು ಶಾಶ್ವತವಾಗಿ ನಾಶವಾಗುತ್ತಾರೆ. ಇದಲ್ಲದೆ ದೇವರ ವಾಕ್ಯ ಹೇಳಿರುವದನ್ನು ಮಾಡದೆ ಇರುವದರಿಂದ ಅನೇಕರು ತಮಗೆ ಸಿಗಬಹುದಾಗಿದ್ದ ಬಹುಮಾನವನ್ನೂ ನಷ್ಟಪಡಿಸಿಕೊಳ್ಳುವವರಾಗಿದ್ದಾರೆ. **23**

**1:23** *"ಕನ್ನಡಿ"*– ಸತ್ಯವೇದವು ಕನ್ನಡಿಯಂತಿದೆ. ಒಂದುವೇಳೆ ನಮ್ಮನ್ನು ನಾವೇ ಅದರಲ್ಲಿ ಪರೀಕ್ಷಿಸಿಕೊಂಡರೆ, ನಾವೇನು ಎಂಬದನ್ನು ಅದು ನಮಗೆ ತೋರಿಸುತ್ತದೆ. ಆದರೆ ಒಂದುವೇಳೆ ನಾವು ಈ ತಿಳುವಳಿಕೆಗನುಸಾರ ನಡೆದುಕೊಳ್ಳದೆ ಹೋದರೆ, ಅದರಿಂದ ನಮಗೆ ಯಾವುದೇ ಪ್ರಯೋಜನವಾಗುವದಿಲ್ಲ ಮತ್ತು ನಾವು ಬೇಗನೇ ಅದನ್ನು ಮರೆತುಹೋಗುತ್ತೇವೆ. **25**

**1:25** ಮೋಶೆಯ ಧರ್ಮಶಾಸ್ತ್ರದಿಂದ ಬಂಧನವು ಎದುರಾಯಿತು - ಅಪೊ 15:10; ಗಲಾ 5:1. ವಿಶ್ವಾಸಿಗಳು ಆ ಧರ್ಮಶಾಸ್ತ್ರದಿಂದ ಸ್ವತಂತ್ರರಾಗಿದ್ದಾರೆ – ರೋಮಾ 6:14; 7:4. ಆದರೆ ಅವರು ಯೇಸು ಕ್ರಿಸ್ತನ ಧರ್ಮಶಾಸ್ತ್ರದ ಅಡಿಯಲ್ಲಿದ್ದಾರೆ – 1 ಕೊರಿಂಥ 9:21 – ಅದು ಪ್ರೀತಿ ಮತ್ತು ಕೃಪೆಯ ಧರ್ಮಶಾಸ್ತ್ರವಾಗಿದೆ. ಈ ಧರ್ಮಶಾಸ್ತ್ರಕ್ಕೆ ನಾವು ವಿಧೇಯರಾಗುವಾಗ ನಮಗೆ ಸ್ವಾತಂತ್ರ್ಯವು ದೊರೆಯುತ್ತದೆ – ಪಾಪ ಮಾಡುವ ಸ್ವಾತಂತ್ರ್ಯವಲ್ಲ ಬದಲಾಗಿ ಪಾಪ ಮಾಡದಿರುವ ಸ್ವಾತಂತ್ರ್ಯ ದೊರೆಯುತ್ತದೆ. **26**

**1:26** ವಚನ 19; 3:2-12. ಪ್ರತಿಯೊಂದು ಕಡೆಯೂ ತಮ್ಮ ನಾಲಿಗೆಯನ್ನು ನಿಯಂತ್ರಣದಲ್ಲಿಟ್ಟುಕೊಳ್ಳದಿರುವ ಅನೇಕರಿದ್ದಾರೆ. ಇದಕ್ಕನುಸಾರ ಅನೇಕರು ಮೋಸಹೋಗಿದ್ದಾರೆ ಮತ್ತು ಅರ್ಥಹೀನವಾದ ಆರಾಧನೆಯನ್ನು ನಡೆಸುವವರಾಗಿದ್ದಾರೆ. **27**

**1:27** ದೇವರು ಎಲ್ಲಾ ರೀತಿಯ ಆರಾಧನೆ ಮತ್ತು ಧರ್ಮವನ್ನು ಅಂಗೀಕರಿಸಿಕೊಳ್ಳುವದಿಲ್ಲ ಎಂಬದನ್ನು ನಾವು ಅರ್ಥಮಾಡಿಕೊಳ್ಳಬೇಕು – ಮತ್ತಾಯ 15:8-9 . ಕೀರ್ತನೆ 50:7-21; ಯೆಶಾಯ 1:11-17 ರೊಂದಿಗೆ ಹೋಲಿಸಿ ನೋಡಿರಿ. ದೇವರು ನೋಡಲು ಬಯಸುವ ಧರ್ಮ ಪ್ರೀತಿ ಮತ್ತು ಕ್ರಿಯಾರೂಪದ ಪರಿಶುದ್ಧತೆಯಾಗಿದೆಯೇ ಹೊರತು, ಕೇವಲ ಮಾತುಗಳಲ್ಲ. ದೇವರು ದುರ್ಬಲರು, ಅಸಹಾಯಕರು ಮತ್ತು ಬಡವರ

ವಿಷಯದಲ್ಲಿ ವಿಶೇಷ ಕಾಳಜಿಯುಳ್ಳವನಾಗಿದ್ದಾನೆ – ವಿಮೋ 22:22; 23:11; ಯಾಜಕ 23:22; ಧರ್ಮೋ 10:18; 24:19; ಕೀರ್ತನೆ 146:9; ಯೆಶಾಯ 1:17; ಇತರೆ ವಚನಭಾಗಗಳನ್ನು ಗಲಾ 2:10 ರಲ್ಲಿ ನೋಡಿರಿ. ಒಂದುವೇಳೆ ನಾವು ದೇವರಿಗೆ ಮೆಚ್ಚಿಕೆಯುಳ್ಳವರಾಗಿರಬೇಕೆಂದರೆ ನಾವೂ ಅವರ ಬಗ್ಗೆ ಚಿಂತಿಸುವವರಾಗಿರಬೇಕು. ದೇವರು ಲೋಕದ ಮಲಿನಗಳನ್ನು ದ್ವೇಷಿಸುವವನಾಗಿದ್ದಾನೆ. ಹಾಗೆಯೇ ನಾವೂ ನಮ್ಮ ಆರಾಧನೆಗಳು ಸಂಪೂರ್ಣವಾಗಿ ಆತನಿಗೆ ಮೆಚ್ಚಿಕೆಯಾಗಬೇಕೆಂದು ಬಯಸಿದರೆ ಅವುಗಳನ್ನು ದ್ವೇಷಿಸುವವರಾಗಿರಬೇಕು (ರೋಮಾ 1:18; 2 ಕೊರಿಂಥ 6:17; 7:1; 1 ಪೇತ್ರ 1:15-16; ಯೂದ 23).

# 2 1-4

**2:1-4** ದೇವರು ಪಕ್ಷಪಾತ ತೋರಿಸುವದಿಲ್ಲ. ಯೇಸು ಕ್ರಿಸ್ತನಲ್ಲಿ ವಿಶ್ವಾಸಿಗಳಾಗಿ ಈ ವಿಷಯದಲ್ಲಿ ನಾವು ಆತನ ಮಾದರಿಯನ್ನು ಅನುಸರಿಸಬೇಕು (ರೋಮಾ 2:11; 1 ಕೊರಿಂಥ 12:13; ಎಫೆ 6:9; ಕೊಲೊ 3:11,25; 1 ತಿಮೊ 5:21; 1 ಪೇತ್ರ 1:17). ಈ ಸೂಚನೆಯನ್ನು ಸಭೆಗಳಲ್ಲಿ ಸಹಜವಾಗಿ ಕಡೆಗಣಿಸಲಾಗುತ್ತಿರುವದು ಮತ್ತು ಅವಿಧೇಯರಾಗುತ್ತಾ ಇರುವದು ದುಃಖದ ಸತ್ಯವಾಗಿದೆ. ಯಾಕೋಬನು (ಮತ್ತು ಯಾಕೋಬನ ಮೂಲಕ ಮಾತನಾಡುತ್ತಿರುವ ದೇವರಾತ್ಮನು) ನಮಗೆ ಸರಳವಾಗಿ ಹೇಳುತ್ತಾ ಇರುವದೇನೆಂದರೆ ಪಕ್ಷಪಾತವು "ದುಷ್ಟ ಆಲೋಚನೆಗಳಿಂದ" (ವ 4) ಬರುತ್ತವೆ. ಯೇಸು ಕ್ರಿಸ್ತನಲ್ಲಿ ನಾವು ಎಲ್ಲಾ ಮನುಷ್ಯರನ್ನು ಏಕರೀತಿಯಾಗಿ ಅಂಗೀಕರಿಸಿಕೊಳ್ಳಬೇಕು, ಮತ್ತು ಎಲ್ಲರನ್ನು ಸಮಾನವಾಗಿ ಘನಪಡಿಸಬೇಕು ಮತ್ತು ಗೌರವಿಸಬೇಕು – ರೋಮಾ 12:10-16. ಜೊತೆಯಲ್ಲಿರುವ ವಿಶ್ವಾಸಿಗಳು ಬಡವರು ಅಥವಾ ಅವಿದ್ಯಾವಂತರು ಅಥವಾ ಸರಿಯಾಗಿ ವಸ್ತ್ರಧಾರಣೆಯಿಲ್ಲದವರು ಅಥವಾ ಬೇರೆ ವರ್ಗದವರು ಅಥವಾ ಗುಂಪಿನವರು ಅಥವಾ ಜಾತಿಯವರು ಅಥವಾ ಬೇರೆ ಯಾವುದೇ ಕಾರಣಕ್ಕೆ ಕಡೆಗಣಿಸಲ್ಪಟ್ಟರೆ ಅಂಥವರಿಗೆ ಕ್ರೈಸ್ತರ ನಡುವೆ ಯಾವುದೇ ಸ್ಥಾನ ಇರುವದಿಲ್ಲ.
**1**

**2:1** *"ಪ್ರಭಾವವುಳ್ಳ ನಮ್ಮ ಕರ್ತನು"*– 1 ಕೊರಿಂಥ 2:8. ಲೂಕ 2:11; ಫಿಲಿಪ್ಪಿ 2:10-11 ರಲ್ಲಿ ಕರ್ತನ ಕುರಿತಾದ ನೋಟ್ಸ್ ನೋಡಿರಿ. **5**

**2:5** ಲೂಕ 6:20 ರೊಂದಿಗೆ ಹೋಲಿಸಿ ನೋಡಿರಿ. ಹಾಗೆಯೇ ಮತ್ತಾಯ 11:5; ಲೂಕ 4:18; 1 ಕೊರಿಂಥ 1:26. ಬೌತಿಕ ಕಾರ್ಯಗಳಲ್ಲಿ ಐಶ್ವರ್ಯವಂತರಾಗಿರುವದಕ್ಕಿಂತಲೂ, ನಂಬಿಕೆಯಲ್ಲಿ ಐಶ್ವರ್ಯವಂತರಾಗಿರುವದು ಹೆಚ್ಚೆಚ್ಚು ಉತ್ತಮವಾದ ವಿಷಯವಾಗಿದೆ.

*"ಬಾಧ್ಯರು"*– ಮತ್ತಾಯ 5:5; 1 ಕೊರಿಂಥ 6:9; 15:50; ಗಲಾ 5:21; ಇಬ್ರಿ 1:14; 6:12; ಪ್ರಕ 21:7. ಮತ್ತಾಯ 4:17 ರಲ್ಲಿ ದೇವರ ರಾಜ್ಯದ ಕುರಿತಾದ ನೋಟ್ ನೋಡಿರಿ.

*“ತನ್ನನ್ನು ಪ್ರೀತಿಸುವವರು”*– 1:12. ದೇವರನ್ನು ಪ್ರೀತಿಸದವರಿಗೆ ಆತನೊಂದಿಗೆ ಬಾಧ್ಯತೆ ಇರುವದಿಲ್ಲ – 1 ಕೊರಿಂಥ 16:22; 1 ಯೋಹಾನ 4:8. **7**

**2:7** *“ಹೆಸರು”*– ಕ್ರಿಸ್ತನು. **8**

**2:8** *“ರಾಜಾಜ್ಞೆ”*– ಇದು ಮಾನವ ಸಂಬಂಧಗಳಿಗೆ ಸಂಬಂಧಿಸಿರುವ ಉನ್ನತವಾದ ಆಜ್ಞೆಯಾಗಿದೆ ಮತ್ತು ರಾಜಾಧಿರಾಜನು ತನ್ನ ರಾಜ್ಯದಲ್ಲಿರುವ ಎಲ್ಲರಿಗೆ ಇದನ್ನು ಕೊಟ್ಟಿದ್ದಾನೆ.

*“ನಿನ್ನ ನೆರೆಯವನನ್ನು ನಿನ್ನಂತೆಯೇ ಪ್ರೀತಿಸಬೇಕು”*– ಯಾಜಕ 19:18; ಮತ್ತಾಯ 19:19; 22:39; ಲೂಕ 10:27; ರೋಮಾ 13:9-10; ಗಲಾ 5:14. **9**

**2:9** *“ಪಕ್ಷಪಾತ”*– ಯಾಕೋಬನು ಮತ್ತೆ ನಮ್ಮನ್ನು 1-4 ವಚನಗಳಿಗೆ ಕರೆದುಕೊಂಡು ಹೋಗುತ್ತಾ ಇದ್ದಾನೆ. ಬಡವರನ್ನು ಕಡೆಗಣಿಸಿ ಐಶ್ವರ್ಯವಂತರನ್ನು ಮೆಚ್ಚಿಸುವದು ಪಾಪವಾಗಿದೆ. ಇದು ದೇವರು ಮಾನವರಿಗೆ ಕೊಟ್ಟಿರುವ ಮಹಾಆಜ್ಞೆಗೆ ತೋರುವ ಅವಿಧೇಯತೆಯಾಗಿದೆ. **10**

**2:10** ಒಬ್ಬ ವ್ಯಕ್ತಿ ಧರ್ಮಶಾಸ್ತ್ರವನ್ನೆಲ್ಲಾ ಅನುಸರಿಸಿ ಒಂದು ಆಜ್ಞೆಗೆ ಅವಿಧೇಯನಾದರೆ ಅವನು ಎಲ್ಲಾ ವಿಷಯಗಳಲ್ಲಿಯೂ ಅಪರಾಧಿಯಾಗಿದ್ದಾನೆ. ಒಂದುವೇಳೆ ಅವನು ಪ್ರೀತಿಸಬೇಕೆಂಬ ಆಜ್ಞೆಗೆ ಅವಿಧೇಯನಾದರೆ ಅವನು ರಾಜಾಜ್ಞೆಗೆ ಅವಿಧೇಯನಾಗುವವನಾಗಿದ್ದಾನೆ ಆದ್ದರಿಂದ ದೊಡ್ಡ ಅಪರಾಧಿಯಾಗುತ್ತಾನೆ. ಆದ್ದರಿಂದಲೇ ಪಕ್ಷಪಾತ ಮಾಡುವದು ಸಣ್ಣ ವಿಷಯವಲ್ಲ ಎಂಬದನ್ನು ನಾವು ತಿಳಿದುಕೊಳ್ಳಬಹುದಾಗಿದೆ. ಇದಲ್ಲದೆ ನಾವೆಲ್ಲರೂ ಒಂದಲ್ಲಾ ಒಂದು ರೀತಿಯಲ್ಲಿ ದೇವರ ಧರ್ಮಶಾಸ್ತ್ರವನ್ನು ಉಲ್ಲಂಘಿಸುವವರಾಗಿದ್ದೇವೆ ಎಂಬದನ್ನು ಅರಿತುಕೊಳ್ಳಬೇಕು. ಹಾಗೆಯೇ ನಾವೆಲ್ಲರೂ ಇಡೀ ಧರ್ಮಶಾಸ್ತ್ರದ ತೀರ್ಪಿಗೆ ಅರ್ಹರಾಗಿದ್ದೇವೆ (ಕೊಲೊ 3:10). ನಮ್ಮೆಲ್ಲರಿಗೂ ಯೇಸು ಕ್ರಿಸ್ತನ ಮೂಲಕ ಕ್ಷಮಾಪಣೆ ಅವಶ್ಯವಾಗಿದೆ (ರೋಮಾ 3:9,19,23).

*“ತಪ್ಪಿದರೆ”*– ಗ್ರೀಕ್ ಪದದ ಅಕ್ಷರಾರ್ಥ “ಎಡವುತ್ತಾನೆ” ಎಂಬದಾಗಿದೆ, ಆದರೆ ಈ ಸಂದರ್ಭದಲ್ಲಿ ಧರ್ಮಶಾಸ್ತ್ರವನ್ನು ಉಲ್ಲಂಘಿಸುವವನು ಎಂಬದಾಗಿದೆ. 3:2 ನೋಡಿರಿ ಅಲ್ಲಿಯೂ ಇದೇ ಪದವನ್ನು ಉಪಯೋಗಿಸಲಾಗಿದೆ. **11**

**2:11** ವಿಮೋ 20:13-14. ಆತನು ವ್ಯಭಿಚಾರ, ನರಹತ್ಯೆ ಮತ್ತು ಪಕ್ಷಪಾತ ಎಲ್ಲವನ್ನೂ ಸಂಕ್ಷಿಪ್ತವಾದ ಒಂದೇ ವಚನದಲ್ಲಿ ಸೇರಿಸಿರುವದನ್ನು ಗಮನಿಸಿರಿ. ಈ ರೀತಿಯಾಗಿ ಅವನು ಒಬ್ಬರನ್ನು ಘನಪಡಿಸುವ ಮತ್ತೊಬ್ಬರನ್ನು ಕಡೆಗಣಿಸುವ ಪಕ್ಷಪಾತ ಪಾಪದ ಗಂಭೀರತೆಯನ್ನು ತೋರಿಸಿದ್ದಾನೆ. **12**

**2:12** *“ತೀರ್ಮಾನ”*– 2 ಕೊರಿಂಥ 5:9-10.

*“ಬಿಡುಗಡೆ”*– 1:25. ಒಂದುವೇಳೆ ನಾವೆಲ್ಲರೂ ಬುದ್ಧಿವಂತರಾಗಿದ್ದರೆ ಮುಂಬರುವ

ನ್ಯಾಯವಿಚಾರಣೆಯ ಬೆಳಕಿನಲ್ಲಿ ಎಲ್ಲರೊಂದಿಗೂ ನಡೆದುಕೊಳ್ಳುತ್ತೇವೆ. **13**

**- 2:13** ಮತ್ತಾಯ 5:7; 7:1-2; 18:23-35; ಲೂಕ 6:37-38; ಜ್ಞಾನೋ 21:13; ಕೀರ್ತನೆ 18:25-26. **14**

**2:14** *"ಅಂಥ ನಂಬಿಕೆ ಇವನನ್ನು ರಕ್ಷಿಸುವದೋ?"*– ಇದಕ್ಕೆ ಸ್ಪಷ್ಟವಾದ ಉತ್ತರ "ಅಂಥ ನಂಬಿಕೆ ಇವನನ್ನು ರಕ್ಷಿಸುವದಿಲ್ಲ" –ಎಂಬದಾಗಿದೆ. ಅದಕ್ಕೆ ಕಾರಣವೇನೆಂದರೆ: ಅಂಥ ನಂಬಿಕೆ ಯಥಾರ್ಥವಾದ ನಂಬಿಕೆಯಲ್ಲ, ಸತ್ಯವೇದವು ಹೇಳುವ ರೀತಿ ಅದು ರಕ್ಷಿಸುವಂಥ ನಂಬಿಕೆಯಲ್ಲ. ಸತ್ಯವೇದದ ಸರಳವಾದ ಬೋಧನೆ ಏನೆಂದರೆ: ನಾವು ಕ್ರಿಯೆಗಳಿಂದಲ್ಲ ಬದಲಾಗಿ ನಂಬಿಕೆಯ ಮೂಲಕ ದೇವರ ಕೃಪೆಯಿಂದ ರಕ್ಷಣೆ ಹೊಂದಿದ್ದೇವೆ (ಎಫೆ 2:8-9; ರೋಮಾ 3:24-25,28; 4:5). ಆದರೆ ಕೃಪೆ ಮತ್ತು ನಂಬಿಕೆಯ ಈ ವಿಧಾನದ ಮೂಲಕ ದೇವರು ಜನರನ್ನು ಮಾರ್ಪಡಿಸುತ್ತಾನೆ. ಆತನು ಅವರಿಗೆ ಪುನರುಜ್ಜೀವನವನ್ನು ಕೊಡುತ್ತಾನೆ. ಆತನು ಅವರನ್ನು ನೂತನ ಸೃಷ್ಟಿಗಳನ್ನಾಗಿ ಮಾಡುತ್ತಾನೆ. 1:18; 2 ಕೊರಿಂಥ 5:17 ನೋಡಿರಿ. ಅಂಥವರು ಒಳ್ಳೆಯ ಕೆಲಸಗಳನ್ನು ಮಾಡುವದಕ್ಕಾಗಿ ಯೇಸು ಕ್ರಿಸ್ತನಲ್ಲಿ ನಿರ್ಮಾಣವಾಗಿರುವ ದೇವರ ಕೈಕೆಲಸವಾಗಿದ್ದಾರೆ (ಎಫೆ 2:10). ನಮ್ಮ ನಂಬಿಕೆಯು ಯಥಾರ್ಥವಾದದ್ದು ಎಂಬದಕ್ಕೆ ಒಳ್ಳೆಯ ಕೆಲಸಗಳು ದೇವರು ನಮ್ಮ ಹೃದಯಗಳಲ್ಲಿ ತನ್ನ ಕಾರ್ಯಗಳನ್ನು ನಡೆಸಿದ್ದಾನೆ ಎಂಬದಕ್ಕೆ ಪುರಾವೆಯಾಗಿವೆ (ಇಬ್ರಿ 6:10; ಗಲಾ 5:6). ಸತತವಾಗಿ ನಮ್ಮಲ್ಲಿ ಒಳ್ಳೆಯ ಕಾರ್ಯಗಳ ಕೊರತೆಯಿರುವದಾದರೆ, ನಮ್ಮ ನಂಬಿಕೆಯು ಕೇವಲ ಮಾತುಗಳು ಮಾತ್ರವೇ ಆಗಿವೆ, ನಾವು ದೇವರ ಕೃಪೆಯಿಂದ ಬದಲಾಗಿಲ್ಲ ಎಂಬದಕ್ಕೆ ಪುರಾವೆಯಾಗಿವೆ. ನಿಜವಾದ ನಂಬಿಕೆಯು ಒಬ್ಬ ವ್ಯಕ್ತಿಯ ಜೀವಿತದಲ್ಲಿ ಬಲವಾದ ಶಕ್ತಿಯಾಗಿದೆ. ಇಬ್ರಿ 10:39; 11:4 ರ ನೋಟ್ಸ್ ನೋಡಿರಿ. **15-17**

**2:15-17** ಯಾವುದೇ ಕ್ರಿಯೆಗಳಿಲ್ಲದ ಬರೀ ಮಾತುಗಳು ಆತ್ಮೀಕ ಮರಣದ ಗುರುತಾಗಿದೆ. 1 ಯೋಹಾನ 3:17-18 ರೊಂದಿಗೆ ಹೋಲಿಸಿ ನೋಡಿರಿ. ಈ ರೀತಿಯಾಗಿ ನಡೆದುಕೊಳ್ಳುವ ವ್ಯಕ್ತಿ ತನ್ನಲ್ಲಿ ದೇವರ ಪ್ರೀತಿ ಇಲ್ಲ ಎಂಬದನ್ನು ತೋರಿಸುವವನಾಗಿದ್ದಾನೆ. ಒಂದುವೇಳೆ ಅವನಲ್ಲಿ ಪ್ರೀತಿ ಇಲ್ಲವೆಂದರೆ, ಅವನಿಗೆ ದೇವರು ಯಾರೆಂದೇ ಗೊತ್ತಿಲ್ಲವಾಗಿದೆ (1 ಯೋಹಾನ 4:8). ಬೇರೆ ಮಾತುಗಳಲ್ಲಿ ಹೇಳುವದಾದರೆ, ಅವನು ತನ್ನಲ್ಲಿ ಇದೆ ಎಂದು ಹೇಳಿಕೊಳ್ಳುವ ನಂಬಿಕೆಯು ಯಥಾರ್ಥವಲ್ಲ (2 ಕೊರಿಂಥ 9:15 ರಲ್ಲಿ ಕೊಡಲಾಗಿರುವ ನೋಟ್ಸ್ ನೋಡಿರಿ). "ಜೀವವಿಲ್ಲದ" ನಂಬಿಕೆ ಎಂದರೆ ಏನು? ದೇವರು ನೋಡಲು ಬಯಸುವ – ಕರುಣೆ, ಪ್ರೀತಿ, ದಯೆ ಇತ್ಯಾದಿ (ಗಲಾ 5:22-23) ಫಲಗಳು ಇಲ್ಲದಿರುವ ನಂಬಿಕೆ, ಜೀವವಿಲ್ಲದ ನಂಬಿಕೆಯಾಗಿದೆ. ಜೀವವಿಲ್ಲದ ನಂಬಿಕೆಯು ಅತ್ಯಂತ ಸಂಪ್ರದಾಯಬದ್ಧವಾಗಿರುತ್ತದೆ. ಅದು ಸರಿಯಾದ ಸಿದ್ಧಾಂತಗಳನ್ನು ನಂಬುತ್ತಾ ಇರುತ್ತದೆ. ಅದು ತನ್ನನ್ನು ದೇವರಲ್ಲಿ ಮತ್ತು ಆತನ ವಾಕ್ಯಗಳಲ್ಲಿ ದೃಢವಾದ ಭರವಸೆಯುಳ್ಳದ್ದು

ಎಂಬದಾಗಿ ತೋಪಡಿಸಿಕೊಳ್ಳುತ್ತದೆ. ಆದರೆ ಅದು ತನ್ನನ್ನು ಕರ್ತನಾದ ಯೇಸು ಕ್ರಿಸ್ತನಲ್ಲಿ ರಕ್ಷಿಸುವ, ಜೀವವನ್ನು ಹೊಂದುವ ರೀತಿಯಲ್ಲಿ ಒಪ್ಪಿಸಿಕೊಂಡಿರುವದಿಲ್ಲ. ಯೋಹಾನ 5:39-40 ರೊಂದಿಗೆ ಹೋಲಿಸಿ ನೋಡಿರಿ. **18**

**2:18** ಕೆಲವರು ಯಾಕೋಬನ ಬೋಧನೆಯನ್ನು ನಿರಾಕರಿಸಿರಿ, "ಕೆಲವರಲ್ಲಿ ನಂಬಿಕೆಯಿರುತ್ತದೆ, ಕೆಲವರಲ್ಲಿ ಕ್ರಿಯೆಗಳಿರುತ್ತವೆ. ಅವರಿಬ್ಬರೂ ಧರ್ಮದಲ್ಲಿ ಪ್ರಾಮುಖ್ಯರಾಗಿದ್ದಾರೆ. ಆದರೆ ಒಬ್ಬನಿರದೆ ಮತ್ತೊಬ್ಬನಿರಲು ಸಾಧ್ಯ" ಎಂದು ಹೇಳಬಹುದು. ಯಾಕೋಬನು ಇದನ್ನು ಅಲ್ಲಗಳೆಯುತ್ತಿದ್ದಾನೆ. ಅವನು ಹೇಳುವದೇನೆಂದರೆ ಒಳ್ಳೆಯ ಕಾರ್ಯಗಳು ಇಲ್ಲದೆ ಹೋದರೆ ನಂಬಿಕೆಯೇ ಇರುವದಿಲ್ಲ. ಕ್ರಿಯೆಗಳಿಲ್ಲದೆ ನಂಬಿಕೆಯನ್ನು ತೋರಿಸಲು ಸಾಧ್ಯವಿಲ್ಲ. **19**

**2:19** ದೆವ್ವಗಳಿಗೆ ದೇವರು ಮತ್ತು ಯೇಸು ಕ್ರಿಸ್ತನ ಕುರಿತಾದ ಸತ್ಯಗಳು ಚೆನ್ನಾಗಿ ಗೊತ್ತಿವೆ. ಹಾಗೆಯೇ ಮಾರ್ಕ 5:2-7 ನೋಡಿರಿ. ಅವುಗಳು "ನಂಬುತ್ತವೆ" ಆದರೆ ರಕ್ಷಣೆ ಹೊಂದಿಲ್ಲ. ಅವುಗಳು ನಂಬುತ್ತವೆ, ಆದರೆ ಅವುಗಳಲ್ಲಿ ಯಾವ ಒಳ್ಳೆಯ ಕ್ರಿಯೆಗಳೂ ಇಲ್ಲ. ಅವುಗಳಲ್ಲಿ ಅವುಗಳನ್ನು ಬದಲಾಯಿಸುವಂಥ ಜೀವವುಳ್ಳ ನಂಬಿಕೆಯಿಲ್ಲ. ಅನೇಕ ಧಾರ್ಮಿಕ ಜನರಲ್ಲಿ, ಕ್ರೈಸ್ತರಲ್ಲಿ, ದೆವ್ವಗಳಿಗಿರುವಷ್ಟು ಜೀವವುಳ್ಳ ನಂಬಿಕೆಯೂ ಇಲ್ಲ ಎಂಬದು ದುಃಖಕರ ಹಾಗೂ ಘೋರವಾದ ಸತ್ಯವಾಗಿದೆ. ದೇವರು ಒಬ್ಬನೇ ಎಂದು ಅವುಗಳು ನಂಬುತ್ತವೆ, ಆದರೆ ಅವುಗಳಲ್ಲಿ ಕರುಣೆ, ಪ್ರೀತಿಯಿಲ್ಲ, ಅವುಗಳು ಸ್ವಾರ್ಥ ಹಾಗೂ ಕಠಿಣ ಹೃದಯಿಗಳಾಗಿರುತ್ತವೆ. ಹೀಗಿರುವಾಗ ದೆವ್ವಗಳಿಗೆ ನಂಬಿಕೆಯಿದ್ದರೂ ಪ್ರಯೋಜನವೇನು? **20**

**2:20** *"ಅಪ್ರಯೋಜಕನೇ"*– ಗ್ರೀಕ್ ಪದದ ಅಕ್ಷರಾರ್ಥ "ಖಾಲಿ" –ಮತ್ತು ಇಲ್ಲಿ ದೇವರು ಕೊಡುವ ಜ್ಞಾನದ ಕೊರತೆಯಿರುವ, ಬುರುಡೆಯಲ್ಲಿ ಏನೂ ಇಲ್ಲದಿರುವ ವ್ಯಕ್ತಿಯನ್ನು ಈ ಪದ ಸೂಚಿಸುತ್ತದೆ.

*"ವ್ಯರ್ಥವಾಗಿದೆ"*– ವ್ಯರ್ಥವಾದ ನಂಬಿಕೆಯು ಉಪಯುಕ್ತವಾಗಿರುವ ಏನನ್ನೂ ಕೊಡಲಾರದು. ಅದರಿಂದ ಉಪಯುಕ್ತವಾದ ಯಾವ ಕಾರ್ಯಗಳು ಸಿಗುವದಿಲ್ಲವೆಂದರೆ, ಅದು ದೇವರಿಗೆ ಹೇಗೆ ಮೆಚ್ಚಿಕೆಯುಳ್ಳದ್ದಾಗಿರುತ್ತದೆ? **21-26**

**2:21-26** ಅಪೊಸ್ತಲನಾದ ಪೌಲನು ರೋಮಾ 1:16-17; 3:22-28; 4:5; 10:9-10; ಎಫೆ 2:8-9 ರಲ್ಲಿ ಮಾಡಿರುವ ಬೋಧನೆಗೆ ವಿರುದ್ಧವಾಗಿ ಯಾಕೋಬನು ಏನನ್ನೂ ಹೇಳಿಲ್ಲ. ಬದಲಾಗಿ ಅದೇ ಸತ್ಯದ ಮತ್ತೊಂದು ಭಾಗವನ್ನು ತಿಳಿಸುತ್ತಾ ಇದ್ದಾನೆ. ನಿಜವಾದ ನಂಬಿಕೆ ಮತ್ತು ಒಳ್ಳೆಯ ಕಾರ್ಯಗಳನ್ನು ಬೇರ್ಪಡಿಸಲು ಆಗುವದಿಲ್ಲ ಎಂದು ಅವನು ತೋರಿಸುತ್ತಾ ಇದ್ದಾನೆ – ಅವುಗಳು ಎಷ್ಟು ಐಕ್ಯವಾಗಿವೆ ಎಂದರೆ ಒಂದರ ವಿಷಯದಲ್ಲಿ ಏನು ಹೇಳಬಹುದೋ ಅದನ್ನು ಎರಡರ ವಿಷಯದಲ್ಲಿಯೂ ಹೇಳಬಹುದಾಗಿದೆ. ಪೌಲನು

ರೋಮಾ 2:7-10; ಗಲಾ 5:6; ಎಫೆ 2:10; ತೀತ 2:14 ರಲ್ಲಿ ಕಲಿಸಿರುವ ವಿಷಯಗಳನ್ನೇ ಅವನೂ ಕಲಿಸುತ್ತಾ ಇದ್ದಾನೆ. ಕರ್ತನಾದ ಯೇಸು ಕ್ರಿಸ್ತನೂ ಮತ್ತಾಯ 7:21,24-27; 25:35-43 ರಲ್ಲಿ ಇದನ್ನೇ ಕಲಿಸಿದ್ದಾನೆ. ಪ್ರೀತಿಯ ಮೂಲಕ ತನ್ನನ್ನು ತೋರ್ಪಡಿಸಿಕೊಳ್ಳದ ನಂಬಿಕೆಯು, ಜೀವವಿಲ್ಲದ ನಂಬಿಕೆಯಾಗಿದೆ. ಒಳ್ಳೆಯ ಕಾರ್ಯಗಳು ನಂಬಿಕೆಯ ಮೂಲಕ ವ್ಯಕ್ತವಾಗುತ್ತವೆ ಎಂಬದನ್ನು ಯಾಕೋಬನ ಭಾಷೆಯು ತಿಳಿಸುವದರಿಂದ, ಅವುಗಳನ್ನು ನಂಬಿಕೆಯ ಭಾಗವೆಂದು ಪರಿಗಣಿಸಬಹುದಾಗಿದೆ. ಯಾಕೋಬನು ಪೌಲನು ಕಲಿಸಿರುವದಕ್ಕೆ ವಿರುದ್ಧವಾಗಿರುವ ಯಾವುದನ್ನೂ ಕಲಿಸುತ್ತಾ ಇಲ್ಲ. ಒಳ್ಳೆಯ ಕ್ರಿಯೆಗಳು ಫಲಿತಾಂಶವಾಗಿ ದೊರೆಯದಿದ್ದರೂ ನಂಬಿಕೆ ಇದ್ದರೆ ಮಾತ್ರ ಸಾಕು ಎಂಬದಾಗಿ ಹೇಳಿದವರನ್ನು ಅವನು ವಿರೋಧಿಸುತ್ತಾ ಇದ್ದಾನೆ. **21**

- **2:21** ಆದಿ 22:1-18. **22**

**2:22** ಒಂದುವೇಳೆ ನಂಬಿಕೆ ಮತ್ತು ಕ್ರಿಯೆಗಳು ಒಟ್ಟಾಗಿ ಕಾರ್ಯಮಾಡದೆ ಹೋದರೆ, ಅವುಗಳು ಪ್ರತ್ಯೇಕವಾಗಿಯೂ ಕಾರ್ಯಮಾಡಲಾರವು. ಕ್ರಿಯೆಗಳು ನಂಬಿಕೆ, ನಂಬಿಕೆಯ ನೆರವೇರುವಿಕೆ, ತನ್ನನ್ನೇ ಪ್ರಕಟಿಸಿಕೊಳ್ಳುವ ನಂಬಿಕೆಗೆ ಪುರಾವೆಯಾಗಿವೆ. **23**

**2:23** ಆದಿ 15:6; ರೋಮಾ 4:3 ನೋಡಿರಿ. ಅಬ್ರಹಾಮನು ಇಸಾಕನನ್ನು ಅರ್ಪಿಸುವದಕ್ಕಿಂತ ಅನೇಕ ವರ್ಷಗಳ ಹಿಂದೆಯೇ ಈ ಘಟನೆ ಸಂಭವಿಸಿತು ಎಂಬದು ಯಾಕೋಬನಿಗೆ ಮತ್ತು ಅವನ ಓದುಗರಿಗೆ ತಿಳಿದಿತ್ತು. ದೇವರು ಅಬ್ರಹಾಮನನ್ನು ನಂಬಿಕೆಯ ಮೂಲಕ ನೀತಿವಂತನೆಂದು ಮುಂಚೆಯೇ ಎಣಿಸಿದ್ದನು. ಆದರೆ ಅಬ್ರಹಾಮನ ನಂಬಿಕೆಯು ಜೀವವುಳ್ಳದ್ದಾಗಿತ್ತು ಮತ್ತು ಇಸಾಕನನ್ನು ಅರ್ಪಿಸುವಾಗ ನೆರವೇರಿತು. ಇದಲ್ಲದೆ ಇಸಾಕನನ್ನು ನಿಜವಾಗಿಯೂ ಅರ್ಪಿಸುವದಕ್ಕಿಂತ ಮುಂಚಿತವಾಗಿಯೇ ಅವನನ್ನು ಅರ್ಪಿಸುವದು ಅಬ್ರಹಾಮನ ನಂಬಿಕೆಯಲ್ಲಿ ನೆಲೆಯಾಗಿತ್ತು ಎಂಬದನ್ನು ನಾವು ಹೇಳಬಹುದಾಗಿದೆ.

"*ದೇವರ ಸ್ನೇಹಿತನು*"– 2 ಪೂರ್ವ 20:7. ಯೋಹಾನ 15:15 ರೊಂದಿಗೆ ಹೋಲಿಸಿ ನೋಡಿರಿ. **24**

**2:24** ಆತನು ಪ್ರಾಧಾನ್ಯತೆಯನ್ನು ಸೂಚಿಸುವ ಸಲುವಾಗಿ ಈ ರೀತಿಯಾಗಿ ಮಾತನಾಡುತ್ತಾ ಇದ್ದಾನೆ. ಒಳ್ಳೆಯ ಕಾರ್ಯಗಳನ್ನು ಉಂಟುಮಾಡುವ ನಂಬಿಕೆ, ಒಳ್ಳೆಯ ಕಾರ್ಯಗಳನ್ನು ಒಳಗೊಂಡಿರುವಂಥ ನಂಬಿಕೆಯುಳ್ಳ ಜನರನ್ನು ದೇವರು ನೀತಿವಂತರೆಂದು ನಿರ್ಣಯಿಸುತ್ತಾನೆ ಎಂಬದಾಗಿ ಅವನು ಹೇಳುತ್ತಾ ಇದ್ದಾನೆ. **25**

**2:25** ಯೆಹೋ 2:1-21; ಇಬ್ರಿ 11:31. ಒಂದುವೇಳೆ ರಾಹಬಳಿಗೆ ನಂಬಿಕೆಯಿರದೆ ಹೋಗಿದ್ದರೆ ಅವಳು ಹಾಗೆ ನಡೆದುಕೊಳ್ಳುತ್ತಾ ಇರಲಿಲ್ಲ. ಆಕೆಯ ಕ್ರಿಯೆಗಳು ನಂಬಿಕೆಯ ಮೂಲಕ ವ್ಯಕ್ತವಾದವು, ಅವುಗಳೇ ಆಕೆಯಲ್ಲಿರುವ ನಂಬಿಕೆಗೆ ಪುರಾವೆಯಾಗಿವೆ. **26**

**2:26** ನಂಬಿಕೆಯಲ್ಲಿ ಒಳ್ಳೆಯ ಕಾರ್ಯಗಳು ಅಡಕವಾಗಿಲ್ಲವೆಂದರೆ ಅದು ಒಳ್ಳೆಯ ಕಾರ್ಯಗಳನ್ನು ಮಾಡಲು ಆಗುವದಿಲ್ಲ, ಅದು ಜೀವವಿಲ್ಲದ ಹೆಣಕ್ಕೆ ಸಮಾನವಾಗಿರುತ್ತದೆ. ಅದರಲ್ಲಿ ಜೀವ ಇರುವದಿಲ್ಲ, ಅದು ನಿಷ್ಕ್ರಿಯವಾಗಿರುತ್ತದೆ ಮತ್ತು ಅದರಿಂದ ದುರ್ವಾಸನೆ ಹೊರಡಲು ಪ್ರಾರಂಭವಾಗುತ್ತದೆ. ನಮ್ಮ ನಂಬಿಕೆ ಸಕ್ರಿಯವಾಗಿದೆಯೇ? ಅದು ದೇವರಿಗಾಗಿ ಒಳ್ಳೆಯ ಫಲಗಳನ್ನು ಕೊಡುತ್ತಾ ಇದೆಯೇ? ಒಂದುವೇಳೆ ಇಲ್ಲವಾದರೆ, ನಾವು ದೆವ್ವಗಳ ಹಾಗೆ ನಡುಗುವವರಾಗಿರೋಣ (ವ 19) ಮತ್ತು ಪಶ್ಚಾತ್ತಾಪಟ್ಟು ಪೂರ್ಣ ಹೃದಯದಿಂದ ದೇವರ ಕಡೆಗೆ ತಿರುಗಿಕೊಳ್ಳೋಣ.

# 3 1

**3:1** *"ಬೋಧಕ"*– ಸತ್ಯವೇದವನ್ನು ಬೋಧಿಸುವವನು ಎಂಬದು ಅವನ ಮಾತಿನ ಅರ್ಥ. ಅವನಿಗೆ ಗಂಭೀರವಾದ ಜವಾಬ್ದಾರಿಕೆಯಿರುತ್ತದೆ. ಮೊಟ್ಟಮೊದಲನೆಯದಾಗಿ, ಅವನು ತಾನು ಬೋಧಿಸುತ್ತಿರುವ ಸತ್ಯದ ಪ್ರಕಾರ ಜೀವಿಸಬೇಕು. ಅವನಿಗೆ ಹೆಚ್ಚು ತಿಳುವಳಿಕೆಯಿರುವದರಿಂದ, ದೇವರು ಅವನಿಂದ ಹೆಚ್ಚು ಎದುರುನೋಡುತ್ತಾನೆ ಮತ್ತು ಅವನ ವಿಷಯದಲ್ಲಿ ಕಠಿಣವಾದ ತೀರ್ಪು ಮಾಡುತ್ತಾನೆ. ಲೂಕ 12:47-48 ನೋಡಿರಿ. ಆದ್ದರಿಂದ ಸತ್ಯವೇದವನ್ನು ಬೋಧಿಸುವದು ಅತ್ಯಂತ ಗಂಭೀರವಾದ ವಿಷಯವಾಗಿದೆ. ಅತ್ಯಂತ ಗಂಭೀರವಾಗಿದೆ ಯಾಕಂದರೆ ಅವರು ಮತ್ತು ಉಳಿದ ವಿಶ್ವಾಸಿಗಳೆಲ್ಲರೂ "ಅನೇಕ ವಿಷಯಗಳಲ್ಲಿ ತಪ್ಪುವವರಾಗಿದ್ದಾರೆ." –ಮತ್ತು ಅವರು ತಮ್ಮ ಕೆಲಸದಲ್ಲಿ ಅತ್ಯಂತ ಅಪಾಯಕಾರಿಯಾದ ಸಾಧನವನ್ನು ಉಪಯೋಗಿಸಬೇಕು – ನಾಲಿಗೆ. ಆದ್ದರಿಂದ ಬೋಧಿಸುವ ಕಾರ್ಯದಲ್ಲಿ ಯಾರೂ ಆತುರಪಡಬಾರದು. ಪ್ರತಿಯೊಬ್ಬ ಬೋಧಕನಿಗೂ ದೇವರು ನನ್ನನ್ನು ಬೋಧಿಸಲು ಕರೆಯುತ್ತಿದ್ದಾನೆ ಮತ್ತು ಬೋಧಿಸುವ ವರವನ್ನು ನನಗೆ ಕೊಟ್ಟಿದ್ದಾನೆ (ರೋಮಾ 12:6-7) ಎಂಬ ದೃಢತೆ ಇರಬೇಕು. ದೇವರೇ ಕರೆದು ಸಿದ್ಧಪಡಿಸಿರುವಂಥ ಬೋಧಕನು ಖಂಡಿತವಾಗಿಯೂ ಅದ್ಭುತವಾದ ಮತ್ತು ಸಮಾಧಾನಕರವಾದ ಕಾರ್ಯವನ್ನು ಮಾಡುತ್ತಾನೆ ಹಾಗೂ ಹೆಚ್ಚು ಹಿತವನ್ನು ಮಾಡುತ್ತಾನೆ. ಅಂಥ ಬೋಧಕರೆಲ್ಲರೂ ಉತ್ತಮವಾಗಿ ಸಂತೋಷಿಸುತ್ತಾರೆ – ಮಹಿಮಾರ್ಥವಾದ ಈ ಕರೆಯಲ್ಲಿ ನಡುಗುವವರಾಗಿರುತ್ತಾರೆ. **2**

**3:2** *"ತಪ್ಪುವುದುಂಟು"*– 2:10 ನೋಡಿರಿ, ಇದೇ ಪದವನ್ನು ರೋಮಾ 11:11 ರಲ್ಲಿಯೂ ಉಪಯೋಗಿಸಲಾಗಿದೆ. ಗ್ರೀಕ್ ಪದ "ಎಡವುವುದು" ಎಂಬದಾಗಿದೆ ಆದರೆ ಆಲಂಕಾರಿಕವಾಗಿ ತಪ್ಪುವದು, ದೂರ ಹೋಗುವದು ಅಥವಾ ಪಾಪ ಮಾಡುವದು ಎಂಬ ಪದಗಳಿಗೆ ಪರ್ಯಾಯವಾಗಿ ಉಪಯೋಗಿಸಲಾಗುತ್ತದೆ. ಯಾಕೋಬನು "ನಾವೆಲ್ಲರೂ" –ಇದನ್ನು ಅನೇಕ ವಿಷಯಗಳಲ್ಲಿ ತಪ್ಪುತ್ತೇವೆ ಎಂದು ಹೇಳುತ್ತಾ ಇರುವದನ್ನು ಗಮನಿಸಿರಿ. ಹೀಗಿರುವಾಗ ಮತ್ತಾಯ 6:12; 1 ಯೋಹಾನ 1:9 ನೋಡುವದು ಸಹ ಉತ್ತಮವಾಗಿದೆ.

“*ಒಬ್ಬನು ಮಾತಿನಲ್ಲಿ*”– ಯಾಕೋಬನು ಹೇಳುತ್ತಾ ಇರುವದೇನೆಂದರೆ ಒಬ್ಬ ವ್ಯಕ್ತಿ ತನಗಿರುವವುಗಳಲ್ಲಿ ನಾಲಿಗೆಯನ್ನು ನಿಯಂತ್ರಿಸುವದು ಬಹಳ ಕಷ್ಟ. ಮತ್ತು ಒಬ್ಬನು ತನ್ನ ನಾಲಿಗೆಯನ್ನು ನಿಯಂತ್ರಣದಲ್ಲಿ ಇಟ್ಟುಕೊಂಡಿದ್ದರೆ ಅವನು ಪ್ರವೀಣನು, ಸಮರ್ಥನು ಮತ್ತು ದೇವರು ಕರೆದಿರುವ ಕೆಲಸಕ್ಕೆ ಯೋಗ್ಯನಾಗಿರುತ್ತಾನೆ. **3-5**

**3:3-5** ಇಲ್ಲಿ ಮುಖ್ಯ ವಿಷಯವೇನೆಂದರೆ ಸಣ್ಣ ಕಾರ್ಯಗಳು ದೊಡ್ಡ ಪ್ರಭಾವವನ್ನು ಬೀರುತ್ತವೆ. ನಾಲಿಗೆಗೆ ದೇವರ ಇತರೆ ಭಾಗಗಳಿಗಿಂತ ಒಳ್ಳೆಯದನ್ನು ಅಥವಾ ಕೆಟ್ಟದ್ದನ್ನು ಮಾಡಲು ಹೆಚ್ಚು ಶಕ್ತಿಯಿರುತ್ತದೆ. ಅದಕ್ಕೆ ಅದ್ಭುತವಾದ ಶಕ್ತಿಯಿದೆ. ಅದು ಕಟ್ಟುತ್ತದೆ ಅಥವಾ ಕೆಡವುತ್ತದೆ, ಉಂಟುಮಾಡುತ್ತದೆ ಅಥವಾ ಹಾಳು ಮಾಡುತ್ತದೆ. ಅದು ಜೀವದ ವೃಕ್ಷವಾಗಿದೆ (ಜ್ಞಾನೋ 15:4; 18:21), ಅಥವಾ ಹಾವಿನಂತೆ ವಿಷವಾಗಿದೆ (ಕೀರ್ತನೆ 140:3). ಅದು ಹತ್ಯೆ ಮಾಡುವ ಖಡ್ಗವಾಗಿದೆ (ಕೀರ್ತನೆ 57:4) ಅಥವಾ ಗುಣಪಡಿಸುವ ಔಷಧಿಯಾಗಿದೆ (ಜ್ಞಾನೋ 12:18). ಅದು ತೊಂದರೆ ಮತ್ತು ದುಷ್ಟತನವನ್ನು ಹೆಚ್ಚಿಸುತ್ತದೆ (ಕೀರ್ತನೆ 10:7) ಅಥವಾ ನ್ಯಾಯ ಮತ್ತು ನೀತಿಯನ್ನು ನೆಲೆಗೊಳುಸ್ತುದೆ (ಕೀರ್ತನೆ 37:10; 51:14). **6**

**3:6** ಯಾಕೋಬನು ಸ್ವಾಧೀನಕ್ಕೆ ಒಳಗಾಗದೆ ಇರುವಂಥ, ಸ್ವಾಭಾವಿಕವಾಗಿಯೇ ಇರುವಂಥ ನಾಲಿಗೆಯ ಬಗ್ಗ ಮಾತನಾಡುತ್ತಾ ಇದ್ದಾನೆ. ಮತ್ತು “ನಾಲಿಗೆಯ” ಮೂಲಕ ಅವನು ಮಾತನಾಡುವ ಶಕ್ತಿಯನ್ನು, ಮನಸ್ಸು ಹಾಗೂ ಹೃದಯದಲ್ಲಿರುವದನ್ನು ವ್ಯಕ್ತಪಡಿಸುವ ಸಾಮರ್ಥ್ಯವನ್ನು ತಿಳಿಸುತ್ತಾ ಇದ್ದಾನೆ.

“*ಕಿಚ್ಚು*”– ನಾಲಿಗೆಯು ದೊಡ್ಡ ಕೇಡನ್ನು ಉಂಟುಮಾಡುವ ಸಾಮರ್ಥ್ಯವನ್ನು ಹೊಂದಿದೆ (ಕೀರ್ತನೆ 52:2). ಅದರಿಂದ ಹೊರಡುವ ಒಂದು ಕಿಡಿ ಅನೇಕ ಜನರನ್ನು ಹಾಳು ಮಾಡುತ್ತದೆ. ನಾಲಿಗೆಯು ಅದರೊಳಗೇ ಇಡೀ “ಲೋಕವಾಗಿದೆ.” ಮತ್ತು ಸ್ವಾಭಾವಿಕವಾಗಿ ಆ ಲೋಕವು ದುಷ್ಟತನವಾಗಿದೆ – ಕೀರ್ತನೆ 58:3. ಅದು ಆಸೆ ಮತ್ತು ಪಾಪದ ಬೆಂಕಿಯಿಂದ ತುಂಬಿದೆ, ಆ ಬೆಂಕಿ ನರಕದಿಂದ ಬಂದದ್ದಾಗಿದೆ. ಸೈತಾನನು ಮಾನವರಿಗೆ ಸುಳ್ಳು ಹೇಳುವದು ಮತ್ತು ವಂಚಿಸುವದು, ಗುಣಗುಟ್ಟುವದು, ದೂಷಿಸುವದು ಹಾಗೂ ಶಪಿಸುವದನ್ನು ಕಲಿಸಿದ್ದಾನೆ. ಇವೆಲ್ಲವೂ ಬೆಂಕಿಯಾಗಿದ್ದು ಜೀವನವನ್ನು ಹಾಳು ಮಾಡುತ್ತವೆ. **7-8**

**3:7-8** (ಯೇಸು ಕ್ರಿಸ್ತನನ್ನು ಹೊರತುಪಡಿಸಿರಿ) ಇಡೀ ಮಾನವ ಚರಿತ್ರೆಯಲ್ಲಿ ತನ್ನ ನಾಲಿಗೆಯನ್ನು ಸಂಪೂರ್ಣವಾಗಿ ಸ್ವಾಧೀನಪಡಿಸಿಕೊಂಡಿರುವ ಒಬ್ಬ ವ್ಯಕ್ತಿಯಾದರೂ ಇದ್ದಾನೆಯೇ? ಅಬ್ರಹಾಮನಿಂದ ಆಗಲಿಲ್ಲ – ಆದಿ 12:11-20; 20:2-9; 17:17-18. ಮೋಶೆಯಿಂದ ಆಗಲಿಲ್ಲ – ಸಂಖ್ಯಾ 20:10-12; ಕೀರ್ತನೆ 106:33. ಪೇತ್ರನಿಂದ ಆಗಲಿಲ್ಲ – ಮತ್ತಾಯ 26:69-74. ಪೌಲನಿಂದ ಆಗಲಿಲ್ಲ – ಅಪೊ 23:2-5. ತನ್ನಿಂದಲೂ ಆಗಲಿಲ್ಲ ಎಂಬದಾಗಿ ಯಾಕೋಬನು ಅರಿಕೆ ಮಾಡಿಕೊಂಡಿದ್ದಾನೆ. ಇದರ ಅರ್ಥ ನಮ್ಮ ನಾಲಿಗೆಯನ್ನು ಸ್ವಾಧೀನದಲ್ಲಿಟ್ಟುಕೊಳ್ಳಲು ನಾವು ಪ್ರಯತ್ನಿಸಬಾರದು ಎಂಬದಲ್ಲ. ನಾವು

ಖಂಡಿತವಾಗಿಯೂ ಪ್ರಯತ್ನಿಸಬೇಕು. ಅದರ ಮೇಲೆ ಯಾವುದೇ ನಿಯಂತ್ರಣ ಇಲ್ಲದೆ ಇರುವದಕ್ಕಿಂತ ತಕ್ಕ ಮಟ್ಟಿಗಾದರೂ ನಿಯಂತ್ರಣವುಳ್ಳವರಾಗಿರುವದು ಉತ್ತಮ (ಕೀರ್ತನೆ 141:3; ಜ್ಞಾನೋ 10:19; 11:12; 21:23). ಎಲ್ಲದಕ್ಕಿಂತ ಉತ್ತಮವಾದದ್ದು ನಮ್ಮ ಹೃದಯ ಹಾಗೂ ಮನಸ್ಸುಗಳನ್ನು ದೇವರ ವಾಕ್ಯಗಳಿಂದ ತುಂಬಿಸಿಕೊಂಡರೆ ಆಗ ನಮ್ಮ ನಾಲಿಗೆಯಿಂದ ಕೇವಲ ಒಳ್ಳೆಯ ವಿಷಯಗಳೇ ಹೊರಡುತ್ತವೆ – ಮತ್ತಾಯ 12:34-37; ಕೊಲೊ 3:16. ನಮ್ಮಿಂದ ಮಾತ್ರ ನಮ್ಮ ನಾಲಿಗೆಯನ್ನು ನಿಯಂತ್ರಣದಲ್ಲಿ ಇಟ್ಟುಕೊಳ್ಳಲು ಆಗುವದಿಲ್ಲ ಆದರೆ ದೇವರು ಮತ್ತು ಆತನ ವಾಕ್ಯಗಳ ಸಹಾಯದಿಂದ ನಿಯಂತ್ರಣದಲ್ಲಿ ಇಟ್ಟುಕೊಳ್ಳಬಹುದು. **8**

**3:8** *"ಹತೋಟಿ"*– ಕೀರ್ತನೆ 39:1-3.

*"ಮರಣಕರವಾದ ವಿಷ"*– ಕೀರ್ತನೆ 58:4; ರೋಮಾ 3:13. **9-10**

**3:9-10** ಇದು ಹಾಗಿರಬಾರದು, ಹಾಗಿರುವ ಅವಶ್ಯಕತೆಯೂ ಇಲ್ಲ, ಆದರೆ ಸಾಮನ್ಯವಾಗಿ ಹಾಗೆಯೇ ಇರುತ್ತದೆ. ಕೆಲವರು ಸಾರ್ವಜನಿಕರ ಎದುರಿನಲ್ಲಿ ಭಕ್ತರಾಗಿ ಕಾಣಿಸಿಕೊಳ್ಳುತ್ತಾರೆ, ಆದರೆ ಮನೆಯಲ್ಲಿ ಅಥವಾ ಯಾರೂ ಇಲ್ಲದೆ ಇರುವಾಗ ದೆವ್ವಗಳ ಹಾಗೆ ನಡೆದುಕೊಳ್ಳುತ್ತಾರೆ. **9**

**3:9** *"ದೇವರ ಹೋಲಿಕೆ"*– ಆದಿ 1:26-27; ಎಫೆ 4:24. **11-12**

**3:11-12** ಇಡೀ ಸೃಷ್ಟಿಯಲ್ಲಿ ಮಾನವನ ನಾಲಿಗೆಯೊಂದೇ ಎರಡೂ ರೀತಿಯಲ್ಲಿ ಮತ್ತು ಎರಡು ಸಾಧನಗಳಾಗಿ ತೋರುತ್ತದೆ. **13-18**

**3:13-18** ಲೋಕದಲ್ಲಿ ಎರಡು ರೀತಿಯ ಜ್ಞಾನಗಳಿವೆ. ಒಂದು ಸೈತಾನನಿಂದ ಬರುತ್ತದೆ (ವ 15), ಇನ್ನೊಂದು ದೇವರಿಂದ ಬರುತ್ತದೆ (ವ 17). ಒಂದರಿಂದ ಬರುವ ಫಲಿತಾಂಶಗಳು ಮತ್ತೊಂದರಿಂದ ಬರುವ ಫಲಿತಾಂಶಗಳಿಗಿಂತ ಭಿನ್ನವಾಗಿರುತ್ತವೆ. ಒಬ್ಬ ವ್ಯಕ್ತಿಯ ಜೀವನವನ್ನು ಗಮನಿಸುವದರಿಂದ ಅವನು ಯಥಾರ್ಥವಾಗಿದ್ದಾನೆಯೇ ಇಲ್ಲವೇ ಎಂದು ಹೇಳಬಹುದು. ದುಷ್ಟನು ಅಥವಾ ಗರ್ವಿಷ್ಠನು ಅಥವಾ ಹೊಟ್ಟೆಕಿಚ್ಚು ಪಡುವವನು ಅಥವಾ ಸ್ವಾರ್ಥಿ ಅಥವಾ ಲೌಕಿಕ ಮನಸ್ಥಿತಿಯವನು ಅಥವಾ ಆತ್ಮೀಕನಲ್ಲದವನಲ್ಲಿ ದೇವರಿಂದ ಬರುವಂಥ ಜ್ಞಾನ ಇರುವದಿಲ್ಲ. ಅಂಥವರು ಮಾನವರೆದುರಿನಲ್ಲಿ ಮಾತ್ರವೇ ಗೌರವಕ್ಕೆ ಪಾತ್ರರಾಗಿರುತ್ತಾರೆ. ನಾವು ಬುದ್ಧಿವಂತರು ಎಂದು ಅವರು ಅಂದುಕೊಳ್ಳುತ್ತಾರೆ. ಅವರು ಅತ್ಯಂತ ಬುದ್ಧಿವಂತರಾಗಿರಬಹುದು, ಉಜ್ವಲರಾಗಿರಬಹುದು, ಚುರುಕಾಗಿರಬಹುದು. ಆದರೆ ಅವರಿಗೆ ಜ್ಞಾನವು ಎಲ್ಲಿಂದ ಬರುತ್ತದೆ ಎಂಬದನ್ನು ದೇವರು ನೋಡುವವನಾಗಿದ್ದಾನೆ. ಈ ಎರಡು ರೀತಿಯ ಜ್ಞಾನಗಳ ನಡುವೆಯ ವ್ಯತ್ಯಾಸಕ್ಕಾಗಿ 1 ಕೊರಿಂಥ 1:17—2:16 ನೋಡಿರಿ. **13**

**3:13** ಒಳ್ಳೆಯವರು ಮಾತ್ರವೇ ಜ್ಞಾನಿಗಳಾಗಿದ್ದಾರೆ. ದುಷ್ಟನು ಎಷ್ಟೇ

ಬುದ್ಧಿವಂತನಾಗಿದ್ದರೂ ಮೂರ್ಖನಾಗಿದ್ದಾನೆ. ದೀನತೆಯು ನಿಜವಾಗಿರುವ ಜ್ಞಾನದ ಫಲಗಳಲ್ಲಿ ಒಂದಾಗಿದೆ. ದೇವರಿಂದ ಬರುವಂಥ ಜ್ಞಾನವನ್ನು ಹೊಂದಿರುವವರು ತಮ್ಮನ್ನು ತಾವು ಹೆಚ್ಚಿಸಿಕೊಳ್ಳುವದಿಲ್ಲ, ತಮ್ಮನ್ನೇ ದೇವರೆಂದು ತಿಳಿದುಕೊಳ್ಳುವದಿಲ್ಲ ಅಥವಾ ದುಷ್ಟತನದ ಬಗ್ಗೆ ಯೋಚಿಸುವದಿಲ್ಲ (ಕೀರ್ತನೆ 14:1; 111:10; ಜ್ಞಾನೋ 3:7; 8:1-8). **14**

**3:14** *"ಮತ್ಸರ"*– ಯೋಬ 5:2; ಜ್ಞಾನೋ 14:30; 23:17; ಮತ್ತಾಯ 27:18; ಮಾರ್ಕ 7:22; ರೋಮಾ 1:29; 1 ಕೊರಿಂಥ 13:4; ಗಲಾ 5:26.

*"ಹೊಗಳಿಕೊಳ್ಳುವದಿಲ್ಲ"*– ಕಹಿತನ, ಮತ್ಸರ ಮತ್ತು ಜಗಳದಿಂದ ತುಂಬಿರುವ ವ್ಯಕ್ತಿ ಹೊಗಳಿಕೊಳ್ಳಲು ಸಾಧ್ಯವೇ? ಹೌದು, ಇದೆಲ್ಲಾ ಸತ್ಯ ಎಂದು ಅಲ್ಲಗಳೆಯುವ ಮೂಲಕ ಮಾತ್ರ ಸಾಧ್ಯ. **15**

**3:15** ಬಹುತೇಕ ಧಾರ್ಮಿಕ ಜನರು (ಕ್ರೈಸ್ತರೆಂದು ಹೇಳಿಕೊಳ್ಳುವವರೂ ಸೇರಿ) ದೇವರ ಜ್ಞಾನವಿಲ್ಲದೆ, ದುರಾತ್ಮಗಳ ಜ್ಞಾನವನ್ನು ಹೊಂದಿರುತ್ತಾರೆಯೇ? ಅವರ ಕ್ರಿಯೆಗಳು, ಗುರಿಗಳು ಮತ್ತು ಆಕಾಂಕ್ಷೆಗಳು ಈ ರೀತಿಯಾಗಿ ಆಲೋಚನೆ ಮಾಡಲು ಮುನ್ನಡೆಸುತ್ತವೆ. ಸಾತ್ವಿಕತೆಯ ಕೊರತೆ, ಮತ್ಸರ ಹಾಗೂ ಜಗಳ, ಹೊಗಳಿಕೊಳ್ಳುವಿಕೆ, ಸತ್ಯವನ್ನು ನಿರಾಕರಿಸುವ ಆತ್ಮ – ಇವುಗಳು ದೇವರು ಕೊಡುವ ಜ್ಞಾನವನ್ನು ಪ್ರಕಟಿಸುವದಿಲ್ಲ. **16**

**3:16** ಸೈತಾನನ ಜ್ಞಾನವು ಮಾನವರ ಮನಸ್ಸುಗಳಲ್ಲಿ ಕಾರ್ಯಮಾಡುವದರ ಫಲಿತಾಂಶವನ್ನು ನೋಡಿರಿ. **17**

**3:17** *"ಮೇಲಣಿಂದ ಬರುವ"*– ಪರಲೋಕದ ಜ್ಞಾನ, ದೇವರ ಜ್ಞಾನ – ಜ್ಞಾನೋ 8:22-23; 1 ಕೊರಿಂಥ 1:24,30; 2:7,13; ಕೊಲೊ 2:3.

*"ಪರಿಶುದ್ಧವಾದದ್ದು"*– ದೇವರು ಕೊಡುವ ಜ್ಞಾನವು ಎಲ್ಲಾ ರೀತಿಯ ಪಾಪ ಅಥವಾ ಮಲಿನತೆ ಅಥವಾ ಭ್ರಷ್ಟತೆಯಿಂದ ಬಿಡುಗಡೆಯನ್ನು ಕೊಡುತ್ತದೆ ಮತ್ತು ಅದು ಇಂಥ ಯಾವ ಕಾರ್ಯಗಳಿಗೂ ಮುನ್ನಡೆಸುವದಿಲ್ಲ. ಇದು ಪರಿಶುದ್ಧವಾದದ್ದು ಮತ್ತು ಈ ಲೋಕದ ಜ್ಞಾನದಿಂದ ಪ್ರತ್ಯೇಕವಾದದ್ದಾಗಿದೆ. ಈ ಜ್ಞಾನವು ದೇವರು ಮತ್ತು ಮಾನವನು ಹಾಗೂ ಮಾನವನು ಮತ್ತು ಮಾನವನ ನಡುವೆಯ ಸಮಾಧಾನವನ್ನು ಪ್ರೀತಿಸುತ್ತದೆ. ಇದು ಇತರರ ಹಿತದ ಬಗ್ಗೆ ಚಿಂತಿಸುತ್ತದೆ ಮತ್ತು ಯೋಚಿಸುತ್ತದೆ ಹಾಗೂ ದೇವರಿಗೆ ವಿಧೇಯವಾಗಿ ನಡೆದುಕೊಳ್ಳುತ್ತದೆ. ಇದು ಮತ್ತಾಯ 5:7,9 ರ ಸತ್ಯವನ್ನು ಗುರುತಿಸಿಕೊಳ್ಳುತ್ತದೆ ಮತ್ತು ಅಭ್ಯಾಸ ಮಾಡುತ್ತದೆ. ಇದು ದೇವರ ಮಹಿಮೆಗಾಗಿ ಒಳ್ಳೆಯ ಫಲಗಳನ್ನು ಕೊಡುತ್ತದೆ. ನಾವು ಇತರರೊಂದಿಗೆ ಪಕ್ಷಪಾತವಿಲ್ಲದೆ ನಡೆದುಕೊಳ್ಳಲು (2:1) ಮತ್ತು ಯಥಾರ್ಥವಾಗಿರಲು (ಅಪೊ 2:46; 2 ಕೊರಿಂಥ 1:12; 6:6; 1 ತಿಮೊ 1:5; 2 ತಿಮೊ 1:5; ಇಬ್ರಿ 10:22; 1 ಪೇತ್ರ 1:22) ಸಹಾಯ ಮಾಡುತ್ತದೆ. ಏನೇ ಆದರೂ ಇದರಲ್ಲಿ ಯಾವುದೇ ಕಪಟತನ ಇರುವದಿಲ್ಲ.

ಒಂದುವೇಳೆ ನಮ್ಮಲ್ಲಿ ಇಂಥ ಜ್ಞಾನ ಇಲ್ಲದೆ ಇರುವದಾದರೆ, ದೇವರನ್ನು ಬೇಡಿಕೊಳ್ಳೋಣ, ಮತ್ತು ಆತನು ನಮಗೆ ಅದನ್ನು ಕೊಡುತ್ತಾನೆ ಎಂದು ನಂಬೋಣ – 1:5-6. **18**

**3:18** ದೇವರು ಮತ್ತು ಮನುಷ್ಯರು ಹಾಗೂ ಮನುಷ್ಯರು ಮತ್ತು ಮನುಷ್ಯರ ನಡುವೆ ಸಂಬಂಧಗಳು ಸರಿಯಾಗಿರುವಾಗ ನೀತಿವಂತಿಕೆಯು ಬೆಳೆಯುತ್ತದೆ. ಸಮಾಧಾನ ಮತ್ತು ನೀತಿವಂತಿಕೆಯು ಒಟ್ಟಾಗಿ ಸಾಗುತ್ತದೆ ಹಾಗೂ ದೇವರ ಜ್ಞಾನದಿಂದ ಹರಿಯುತ್ತದೆ – ಕೀರ್ತನೆ 85:10; ಜ್ಞಾನೋ 3:17; ಯೆಶಾಯ 32:17. ಆದದರಿಂದ, ನಮಗೆ ಸಿಗುವ ಎಲ್ಲವುಗಳಲ್ಲಿ, ಜ್ಞಾನವನ್ನು ಪಡೆದುಕೊಳ್ಳೋಣ (ಜ್ಞಾನೋ 2:3-6).

# 4 1-2

**4:1-2** ದೇವರ ಜ್ಞಾನಕ್ಕೆ ಬದಲಾಗಿ ಸೈತಾನನ ಜ್ಞಾನದಿಂದ (3:15) ಉಂಟಾಗುವ ಕೆಲವು ಫಲಿತಾಂಶಗಳನ್ನು ಇಲ್ಲಿ ನೋಡಿಕೊಳ್ಳೋಣ. ಇಲ್ಲಿನ ಚಿತ್ರಣವು ಹೃದಯದ ಒಳಗೆ ನಡೆಯುವ ಯುದ್ಧವನ್ನು ವ್ಯಕ್ತಪಡಿಸುತ್ತದೆ, ಈ ಯುದ್ಧವು ಇತರರೊಂದಿಗೆ ಜಗಳಗಳಿಗೆ ಕಾರಣವಾಗುತ್ತದೆ. 1 ಕೊರಿಂಥ 3:3; ಗಲಾ 5:17 ರೊಂದಿಗೆ ಹೋಲಿಸಿ ನೋಡಿರಿ. **2**

**4:2** *"ಕೊಲೆ ಮತ್ತು ಆಸೆ"*– ಯೇಸು ಕ್ರಿಸ್ತನ ಹಿಂಬಾಲಕರು ಎಂಬದಾಗಿ ಹೇಳಿಕೊಳ್ಳುತ್ತಾ ಇದ್ದ ಯೆಹೂದ್ಯರಿಗೆ ಯಾಕೋಬನು ಬರೆದಿದ್ದಾನೆ. ಅವರಲ್ಲಿ ಕೆಲವರ ನಡವಳಿಕೆಯು ಅವರು ಸೈತಾನನ ಹಿಂಬಾಲಕರೆಂದು ಪ್ರಕಟಪಡಿಸುವದಾಗಿತ್ತು (ಯೋಹಾನ 8:44). ತಪ್ಪಾದ ಬಯಕೆಗಳು ಲೋಕದಲ್ಲಿರುವ ಎಲ್ಲಾ ರೀತಿಯ ಭ್ರಷ್ಟತನಗಳಿಗೆ ಮೂಲವಾಗಿದೆ (1:15).

*"ನೀವು ದೇವರನ್ನು ಬೇಡಿಕೊಳ್ಳದ ಕಾರಣ"*– ಪ್ರಾರ್ಥನೆ ಮಾಡುವ ಬದಲು ಕೆಲವರು ತಮಗೆ ಬೇಕಾದವುಗಳನ್ನು ಪಡೆದುಕೊಳ್ಳಲು ಜಗಳವಾಡುತ್ತಾರೆ, ಕಿತ್ತಾಡುತ್ತಾರೆ ಮತ್ತು ಕೊಲೆಯೂ ಮಾಡುತ್ತಾರೆ. **3**

**4:3** ದೇವರು ಕೆಲವೊಮ್ಮೆ ಪ್ರಾರ್ಥನೆಗಳಿಗೆ ಯಾಕೆ ಉತ್ತರಿಸುವದಿಲ್ಲ ಮತ್ತು ದುರಭಿಪ್ರಾಯಗಳು ಎಂದರೆ ಏನು ಎಂಬದನ್ನು ಎಚ್ಚರಿಕೆಯಿಂದ ಗಮನಿಸಿರಿ. ದೇವರು ಯಾವಾಗಲೂ ನಾವು ಬೇಡಿಕೊಳ್ಳುವ ಎಲ್ಲವುಗಳನ್ನು ಕೊಡುವದಿಲ್ಲ ಯಾಕಂದರೆ, ಒಂದುವೇಳೆ ಆತನು ಎಲ್ಲವನ್ನೂ ಕೊಟ್ಟರೆ ನಾವು ಸ್ವಾರ್ಥಿಗಳಾಗುತ್ತೇವೆ ಮತ್ತು ಎಲ್ಲಾ ವಿಧದಲ್ಲಿಯೂ ಹದಗೆಡುತ್ತೇವೆ. ಸ್ವಾರ್ಥ ಸಂತೋಷದ ಬಯಕೆಯಿಂದಲೇ ಜನರು ಕಾರ್ಯಗಳನ್ನು ಬಯಸುವವರಾಗಿರುತ್ತಾರೆ. ದೇವರು ನಮಗೆ ಕೊಡಲಿಲ್ಲವೆಂದರೆ ನಾವು ಆತನ ಮೇಲೆ ಆರೋಪ ಮಾಡಬಾರದು. ದೇವರು ಕೆಲವು ಬುದ್ಧಿಯಿಲ್ಲದ ತಂದೆತಾಯಿಗಳು ತಮ್ಮ ಮಕ್ಕಳು ಕೇಳುವವುಗಳು ಒಳ್ಳೇಯದೋ ಅಥವಾ ಕೆಟ್ಟದ್ದೋ ಎಂದು ಯೋಚಿಸದೆ ಕೊಡುವ ಹಾಗೆ ಕೊಡುವದಿಲ್ಲ. ನಾವು ನಮ್ಮ ಹೃದಯಗಳನ್ನು ತೆರೆಯೋಣ ಮತ್ತು ಆತನು ನಾವು ಪ್ರಾರ್ಥನೆ ಮಾಡಬೇಕೆಂದು ಬಯಸುವ ರೀತಿಯಲ್ಲಿ ಯಥಾರ್ಥವಾಗಿ ಪ್ರಾರ್ಥನೆ ಮಾಡೋಣ

(ಕೀರ್ತನೆ 139:23-24; 66:18; ಮತ್ತಾಯ 6:9-13). **4**

**4:4** *"ವ್ಯಭಿಚಾರಿಗಳು"*– ಅವರ ನಡುವೆ ನಿಜವಾಗಿಯೂ ವ್ಯಭಿಚಾರದ ಅಪರಾಧ ಮಾಡಿದವರು ಇದ್ದಿರಬಹುದು, ಆದರೆ ಯಾಕೋಬನು ಬಹುಶಃ ಆತ್ಮೀಕ ವಿಷಯಗಳಲ್ಲಿನ ವ್ಯಭಿಚಾರದ ಬಗ್ಗೆ ಮಾತನಾಡುತ್ತಾ ಇದ್ದಾನೆ ಅನ್ನಿಸುತ್ತದೆ, ಯಾಕಂದರೆ ಆತನು ಕೂಡಲೇ ಲೋಕದೊಂದಿಗಿನ ಸ್ನೇಹದ ಬಗ್ಗೆ ಮಾತನಾಡುತ್ತಾ ಇದ್ದಾನೆ. ಆತ್ಮೀಕ ವಿಷಯಗಳಲ್ಲಿನ ವ್ಯಭಿಚಾರದ ಬಗ್ಗೆ ತಿಳಿಯಲು ಯೆರೆ 2:2; 3:6-9; ಯೆಹೆಜ್ಕೇಲ 16:31-34; ಹೋಶೇಯ 1:2 ನೋಡಿರಿ. ಇದರ ಅರ್ಥ ದೇವಜನರೆಂದು ಕರೆಯಲ್ಪಟ್ಟವರು ಬೇರೆಯವುಗಳಿಗಾಗಿ ದೇವರನ್ನೇ ಅಲ್ಲಗಳೆಯುವದಾಗಿದೆ. ಲೋಕದೊಂದಿಗಿನ ಸ್ನೇಹ ದೇವರಿಗೆ ಯಾಕೆ ದ್ವೇಷವಾಗಿದೆ? ಇಲ್ಲಿ "ಲೋಕ" ಎಂದರೆ ಮಾನವರ ಪಾಪ ಸ್ವಭಾವದ ಲೋಕವಾಗಿದೆ. ಯೋಹಾನ 3:19; 7:7; 15:18-21; ಗಲಾ 1:3; 1 ಯೋಹಾನ 2:15-17; 5:19 ರಲ್ಲಿ ಇದನ್ನು ಸ್ಪಷ್ಟವಾಗಿ ವಿವರಿಸಲಾಗಿದೆ. ಅದು ದೇವರಿಗೆ ವಿರುದ್ಧವಾಗಿ ಎದುರುಬೀಳುವದಾಗಿದೆ. ಅದು ಪಾಪವನ್ನು ಪ್ರೀತಿಸುತ್ತದೆ ಮತ್ತು ಯೇಸು ಕ್ರಿಸ್ತನನ್ನು ದ್ವೇಷಿಸುತ್ತದೆ. ಆದ್ದರಿಂದ ಅದರೊಂದಿಗೆ ಸ್ನೇಹ ಬೆಳೆಸುವದು ಒಬ್ಬನೇ ದೇವರ ವೈರಿಗಳೊಂದಿಗೆ ಸೇರಿಕೊಂಡು ಆತನಿಗೆ ವೈರಿಗಳಾಗುವದಾಗಿದೆ. ಗಂಭೀರವಾದ ಈ ಮಾತುಗಳನ್ನು ಹೃದಯದಲ್ಲಿಟ್ಟುಕೊಳ್ಳೋಣ. ಕರ್ತನಾದ ಯೇಸು ಕ್ರಿಸ್ತನನ್ನು ಶಿಲುಬೆಗೆ ಹಾಕಿದ ಲೋಕದೊಂದಿಗೆ ಸ್ನೇಹ ಬೆಳೆಸುವ ಸಾಹಸವನ್ನು ನಾವು ಮಾಡುತ್ತೇವೋ? ಅದರ ಗುರಿಗಳು ಮತ್ತು ಆಕಾಂಕ್ಷೆಗಳು, ಅದರ ಬಯಕೆಗಳು ಮತ್ತು ಸಂತೋಷಗಳು, ಅದರ ವಿಧಾನಗಳು ಮತ್ತು ರೀತಿಗಳನ್ನು ಅನುಸರಿಸುತ್ತೇವೋ? ಎಚ್ಚರಿಕೆಯುಳ್ಳವರಾಗಿರೋಣ. ರೋಮಾ 12:2 ರೊಂದಿಗೆ ಹೋಲಿಸಿ ನೋಡಿರಿ. **5**

**4:5** ಇಲ್ಲಿ ಉಪಯೋಗಿಸಲಾಗಿರುವ ಗ್ರೀಕ್ ಭಾಷೆ ಬಹಳ ಕಷ್ಟಕರವಾಗಿದೆ. ಇದನ್ನು ಹಲವಾರು ವಿಧಗಳಲ್ಲಿ ಭಾಷಾಂತರ ಮಾಡಬಹುದಾಗಿದೆ. ಉದಾಹರಣೆಗೆ, ಮೇಲೆ ಕೊಡಲಾಗಿರುವ ಭಾಷಾಂತರವನ್ನು ಹೊರತುಪಡಿಸಿ ಇದರ ಅರ್ಥ ಏನಾಗಿರಬಹುದೆಂದರೆ – "ದೇವರು ನಮ್ಮೊಳಗೆ ವಾಸಮಾಡುವಂತೆ ಮಾಡಿರುವ ಆತ್ಮನನ್ನು ಅಭಿಮಾನತಾಪದಿಂದ ಎದುರುನೋಡುತ್ತಾನೆ", ಅಥವಾ "ಆತ್ಮನು (ಪವಿತ್ರಾತ್ಮನು) ನಮ್ಮಲ್ಲಿ ವಾಸಮಾಡಬೇಕೆಂದು ಬಯಸಿದಾತನು ಅದನ್ನು ಅಭಿಮಾನತಾಪದಿಂದ ಎದುರುನೋಡುತ್ತಾನೆ". ಇವುಗಳಲ್ಲಿ ಯಾವುದೇ ಆಗಿದ್ದರೂ, ಮಾನವರು ಸ್ವಾಭಾವಿಕವಾಗಿ ಏನೇ ಆಗಿದ್ದರೂ, ನಾವು ಲೋಕವನ್ನು ತ್ಯಜಿಸಿ ಆತನಿಗೆ ಹತ್ತಿರವಾಗುವಂತೆ (ವ 6-8) ದೇವರು ನಮ್ಮನ್ನು ಬಲಪಡಿಸುತ್ತಾನೆ ಎಂದು ಯಾಕೋಬನು ಹೇಳುತ್ತಾ ಇದ್ದಾನೆ, ಯಾಕಂದರೆ ಇದುವೇ ದೇವರ ಬಯಕೆಯಾಗಿದೆ. ದೇವರು ನಮ್ಮ ಆತ್ಮಗಳನ್ನು ಅಭಿಮಾನತಾಪದಿಂದ ಪ್ರೀತಿಸುತ್ತಾನೆ ಮತ್ತು ನಮ್ಮನ್ನು ತನಗಾಗಿ ಬಯಸುತ್ತಾನೆ. ವಿಮೋ 20:5; 34:14; ಧರ್ಮೋ

4:24; 5:9; 6:15; ಯೆಹೋ 24:19 ನೋಡಿರಿ. ಆತನು ನಮ್ಮೆಲ್ಲರಿಗೂ, "ನನ್ನ ಮಗುವೇ, ನಿನ್ನ ಹೃದಯವನ್ನು ನನಗೆ ಕೊಡು" ಎಂದು ಹೇಳುತ್ತಾ ಇದ್ದಾನೆ. **6**

**- 4:6** ಜ್ಞಾನೋ 3:34; 1 ಪೇತ್ರ 5:5.

"*ಅಹಂಕಾರಿಗಳು*"– ಜ್ಞಾನೋ 6:16-17; 16:5; 21:4; ಯೆಶಾಯ 2:12-18; 13:11. ಅಹಂಕಾರವು ನಮ್ಮ ಮೇಲೆ ಆಳ್ವಿಕೆ ಮಾಡಲು ನಾವು ಅನುಮತಿಸುವದಾದರೆ, ದೇವರು ನಮ್ಮ ವೈರಿಯಾಗಿರುತ್ತಾನೆ ಮತ್ತು ನಮಗೆ ವಿರುದ್ಧವಾಗಿ ಯುದ್ಧ ಮಾಡುತ್ತಾನೆ.

"*ಕೃಪೆ*"– ಯೋಹಾನ 1:14,16,17; ರೋಮಾ 5:2,20,21. ಲೋಕವನ್ನು ನಿರಾಕರಿಸಲು, ನಮ್ಮ ಸ್ವಾರ್ಥ ಬಯಕೆಗಳನ್ನು ಜಯಿಸಲು ಮತ್ತು ನಮ್ಮನ್ನೇ ದೇವರಿಗೆ ಸಮರ್ಪಿಸಲು ನಮಗೆ ದೇವರ ಕೃಪೆ ಬೇಕು.

"*ದೀನರು*"– 3:13; ಕೀರ್ತನೆ 138:6; ಜ್ಞಾನೋ 16:19; ಯೆಶಾಯ 57:15; 66:2; ಮತ್ತಾಯ 5:3; 18:3-4. **7**

**4:7** "*ಒಳಗಾಗಿರಿ*"– ದೀನರು ಇದನ್ನು ಮಾಡುತ್ತಾರೆ, ಅಹಂಕಾರಿಗಳು ಇದನ್ನು ಮಾಡುವದಿಲ್ಲ.

"*ಅವನು ಓಡಿಹೋಗುವನು*"– ಇಲ್ಲಿ ದೊಡ್ಡ ವಾಗ್ದಾನ ಕೊಡಲಾಗಿದೆ. ದೇವರು ಕೊಡುವ ಬಲದಲ್ಲಿ ಯಾರೆಲ್ಲಾ ಸೈತಾನನ್ನು ಎದುರಿಸುತ್ತಾರೋ ಅವರನ್ನು ಕಂಡರೆ ಸೈತಾನನು ಹೆದರಿಕೊಳ್ಳುತ್ತಾನೆ. ಆದರೆ ಯಾರು ದೇವರಿಗೆ ಒಳಗಾಗುತ್ತಾರೋ ಅವರ ಬಳಿಯಿಂದ ಮಾತ್ರವೇ ಅವನು ಓಡಿಹೋಗುತ್ತಾನೆ. ಮೊದಲು ದೇವರಿಗೆ ಒಳಗಾಗಬೇಕು ನಂತರ ಸೈತಾನನನ್ನು ಎದುರಿಸಬೇಕು. ಮತ್ತಾಯ 4:1 ರಲ್ಲಿ ಸೈತಾನನ ಕುರಿತಾದ ನೋಟ್ ನೋಡಿರಿ. ಒಬ್ಬನು ತನ್ನ ಸ್ವಂತ ಬಲದಲ್ಲಿ ಅಥವಾ ಅಹಂಕಾರದಲ್ಲಿ ಸೈತಾನನನ್ನು ಎದುರಿಸುವದು ಮೇಲಿಂದ ಕೆಳಗೆ ಬೀಳುವದು ಎರಡೂ ಒಂದೇ ಆಗಿದೆ. **8**

**4:8** ಇದು ಮತ್ತೊಂದು ಮಹದಾದ ವಾಗ್ದಾನವಾಗಿದ್ದು ಇದನ್ನು ನಾವು ಬಿಗಿಯಾಗಿ ಹಿಡಿದುಕೊಳ್ಳಬಹುದಾಗಿದೆ, ಆದರೆ ಆತನು ಹೇಳುವ ರೀತಿಯಲ್ಲಿಯೇ ನಾವು ಆತನ ಬಳಿಗೆ ಬರಬೇಕು. ಜೆಕರ್ಯ 1:3 ರೊಂದಿಗೆ ಹೋಲಿಸಿ ನೋಡಿರಿ.

"*ಶುಚಿಮಾಡಿಕೊಳ್ಳಿರಿ*"– ಯೆಶಾಯ 1:16-17 ರೊಂದಿಗೆ ಹೋಲಿಸಿ ನೋಡಿರಿ.

"*ನಿಮ್ಮ ಹೃದಯಗಳನ್ನು ನಿರ್ಮಲಮಾಡಿಕೊಳ್ಳಿರಿ*"– ಯೆಹೆಜ್ಕೇಲ 18:31 ರೊಂದಿಗೆ ಹೋಲಿಸಿ ನೋಡಿರಿ. ಯಾಕೋಬನು ಪೂರ್ಣವಾದ ಪಶ್ಚಾತ್ತಾಪ (ಮತ್ತಾಯ 3:2,8 ರಲ್ಲಿ ನೋಟ್ಸ್ ನೋಡಿರಿ) ಮತ್ತು ನಿರ್ಮಲರಾಗಲು ದೇವರು ಕೊಟ್ಟಿರುವ ಸಾಧನಗಳ – 1 ಪೇತ್ರ 1:22; 1 ಯೋಹಾನ 1:7,9 ಪೂರ್ಣ ಉಪಯೋಗದ ಬಗ್ಗೆ ಮಾತನಾಡುತ್ತಾ ಇದ್ದಾನೆ.

"*ಎರಡು ಮನಸ್ಸುಳ್ಳವರು*"– 1:8. ದೇವರು ನಮ್ಮ ಸಮೀಪಕ್ಕೆ ಬರಬೇಕು ನಾವು ಬಯಸುವದಾದರೆ, ಎಲ್ಲಾ ರೀತಿಯ ಪಾಪಗಳಿಂದ ನಾವು ದೂರವಿರಬೇಕು ಮತ್ತು ಆತನಲ್ಲಿ

ದೃಢವಾದ ನಂಬಿಕೆಯನ್ನಿಡಬೇಕು. **9**

**4:9** ಮತ್ತಾಯ 5:4; ಲೂಕ 6:21; 2 ಕೊರಿಂಥ 7:8-10. ಯಾಕೋಬನು ಪಾಪದಿಂದ ಉಂಟಾಗುವ ದುಃಖದ ಬಗ್ಗೆ ಮಾತನಾಡುತ್ತಾ ಇದ್ದಾನೆ. ಪಾಪವನ್ನು ಲಘುವಾಗಿ ಪರಿಗಣಿಸುವವರನ್ನು ಆಶೀರ್ವದಿಸಲು ದೇವರು ಅವರ ಸಮೀಪಕ್ಕೆ ಬರುವದಿಲ್ಲ. ನಮ್ಮ ದುಃಖ ಮತ್ತು ಗೋಳಾಟ ಎಷ್ಟರ ತನಕ ಮುಂದುವರೆಯಬೇಕು? ದೇವರು ನಮಗೆ ಸಮೀಪವಾಗಿದ್ದಾನೆ, ನಮ್ಮನ್ನು ಕ್ಷಮಿಸಿದ್ದಾನೆ ಮತ್ತು ನಮ್ಮನ್ನು ಮೇಲೆತ್ತಿದ್ದಾನೆ ಎಂಬದನ್ನು ತಿಳಿಯುವ ತನಕ ಮುಂದುವರೆಯಬೇಕು. ನಾವು ಸಂಪೂರ್ಣವಾಗಿ ಪಶ್ಚಾತ್ತಾಪಪಡಬೇಕು (ಯೆರೆ 29:13). **10**

**4:10** ವಚನ 6; ಲೂಕ 1:52; 1 ಸಮು 2:7-8; ಕೀರ್ತನೆ 15:1,3; 50:20; ಜ್ಞಾನೋ 10:18; ಮತ್ತಾಯ 15:19; 23:12; ಎಫೆ 4:31; ಕೊಲೊ 3:8. **11**

**4:11** *"ನಿಂದಿಸಬೇಡಿರಿ"*– ನಿಂದಿಸುವದು ಸೈತಾನನ ಕಾರ್ಯ ಮತ್ತು ಅವನ ಹೆಸರಿನ ಅರ್ಥವಾಗಿದೆ. ಸೈತಾನನ ಕಾರ್ಯಮಾಡುವದರಲ್ಲಿ ಕ್ರೈಸ್ತರಿಗೆ ಆಸಕ್ತಿ ಏನು? ಯಾವನಾದರೂ ಮತ್ತೊಬ್ಬನಿಗೆ ವಿರುದ್ಧವಾಗಿ ಮಾತನಾಡಿದರೆ ಅವನ ವಿಷಯದಲ್ಲಿ ತೀರ್ಪು ಮಾಡಿದಂತಾಗುತ್ತದೆ. ನಮ್ಮಂತೆಯೇ ನಾವು ಇತರರನ್ನು ಪ್ರೀತಿಸಬೇಕು ಎಂದು ಧರ್ಮಶಾಸ್ತ್ರವು ನಮಗೆ ಹೇಳುತ್ತದೆ (2:8). ಅವರಿಗೆ ವಿರುದ್ಧವಾಗಿ ಮಾತನಾಡುವದು ಅವರ ಮೇಲೆ ಪ್ರೀತಿ ಇಲ್ಲದೆ ಇರುವದನ್ನು ಸೂಚಿಸುತ್ತದೆ. ಮತ್ತು ಒಂದುವೇಳೆ ಒಬ್ಬನು ಈ ಕಾರ್ಯವನ್ನು ಮಾಡುವದಾದರೆ ಅವನು ತನ್ನನ್ನು ಧರ್ಮಶಾಸ್ತ್ರಕ್ಕಿಂತ ಹೆಚ್ಚಿನವನೆಂದು ಭಾವಿಸುತ್ತಿದ್ದಾನೆ ಮತ್ತು ಅದರ ಮಾತುಗಳಿಗೆ ಯಾವುದೇ ಪ್ರಾಮುಖ್ಯತೆಯಿಲ್ಲ ಎಂಬದಾಗಿ ಯೋಚಿಸುತ್ತಾ, ಅದರ ವಿಷಯದಲ್ಲಿ ತೀರ್ಪು ಮಾಡುವವನಾಗಿದ್ದಾನೆ. **12**

**4:12** *"ನ್ಯಾಯಾಧಿಪತಿ"*– ಯೆಶಾಯ 33:22; ವಿಮೋ 20:1.

*"ಉಳಿಸುವದಕ್ಕೂ ನಾಶಮಾಡುವದಕ್ಕೂ"*– ಮತ್ತಾಯ 10:28; ಯೆಶಾಯ 43:11.

*"ನಿನ್ನ ನೆರೆಯವನ ವಿಷಯದಲ್ಲಿ ತೀರ್ಪು ಮಾಡುವದಕ್ಕೆ ನೀನು ಯಾರು"*– ಮತ್ತಾಯ 7:1-2; ರೋಮಾ 14:4,10-13. **13**

**4:13** ಇಲ್ಲಿ ಸಹಜವಾಗಿ ಕ್ರೈಸ್ತರ ನಡುವೆಯೂ ಇರುವ ಸಾಮಾನ್ಯವಾದ ದೋಷವನ್ನು ನಾವು ನೋಡಬಹುದು. ಕೆಲವರು ದೇವರು ತಮಗೆ ಪ್ರಾಮುಖ್ಯನೇ ಅಲ್ಲ, ಆತನ ಮಾರ್ಗದರ್ಶನ ಮತ್ತು ಸಹಾಯವಿಲ್ಲದೆಯೇ ತಮ್ಮ ಕಾರ್ಯಗಳನ್ನು ಸುಲಭವಾಗಿ ಸಾಗಿಸಬಹುದು ಎಂಬ ಯೋಚನೆಯೊಂದಿಗೆ ಯೋಜನೆಗಳನ್ನು ಹಾಕಿಕೊಳ್ಳುತ್ತಾರೆ. **14**

**4:14** 1:10-11; ಯೋಬ 7:7; ಕೀರ್ತನೆ 39:5; 102:3; 144:4; ಜ್ಞಾನೋ 27:1; 1 ಪೇತ್ರ 1:24; ಲೂಕ 12:16-20 ರೊಂದಿಗೆ ಹೋಲಿಸಿ ನೋಡಿರಿ. ನಾಳೆ ಎಂಥಾ ಪ್ರಕೃತಿ ವಿಕೋಪ ಉಂಟಾಗಬಹುದು ಅಥವಾ ಅನರೀಕ್ಷಿತವಾದ ಯಾವ ಘಟನೆ ಸಂಭವಿಸಬಹುದು ಅಥವಾ

ನಾಳೆಯೇ ಭೂಮಿಯ ಮೇಲೆ ನಮ್ಮ ಕಡೆಯ ದಿನವೇ ಎಂಬದೂ ನಮಗೆ ಗೊತ್ತಿಲ್ಲ. **15**

**4:15** *"ಹೇಳಬೇಕು"*– ಸಂಪ್ರದಾಯದ ರೀತಿಯಲ್ಲಿ ತೋರುವ ಮಾತುಗಳನ್ನು ನಾವು ಹೇಳಬೇಕು ಎಂಬದಾಗಿ ಅವನು ಸೂಚಿಸುತ್ತಾ ಇಲ್ಲ. ನಾವು ಅವುಗಳಿಗೆ ಬೆಲೆಕೊಡಬೇಕು ಮತ್ತು ದೇವರ ಚಿತ್ತಕ್ಕೆ ನಮ್ಮನ್ನು ಒಪ್ಪಿಸಬೇಕು ಹಾಗೂ ಆತನು ನಮಗೆ ಹೇಳುವ ಕಾರ್ಯಗಳನ್ನು ಮಾಡಬೇಕು (ವ 7; ಮತ್ತಾಯ 6:10; ಯೋಹಾನ 4:34; ಅಪೊ 21:14; ರೋಮಾ 1:10; 12:1-2). **16**

**4:16** *"ನೀವು ಹೊಗಳಿಕೊಳ್ಳುತ್ತೀರಿ"*– ಕೀರ್ತನೆ 52:1; 75:4; ಯೆರೆ 9:23; ಆಮೋಸ 4:5; 1 ಕೊರಿಂಥ 4:7; ಗಲಾ 6:13. ಮಾನವರಿಗೆ ತಮ್ಮ ಸಾಧನೆಗಳು ಅಥವಾ ಯೋಜನೆಗಳು ಅಥವಾ ಮುಂದೆ ಮಾಡಬಯಸುವ ಕಾರ್ಯಗಳ ಬಗ್ಗೆ ಹೊಗಳಿಕೊಳ್ಳಲು ಬಹಳ ಇಷ್ಟ. ಅಂಥ ಹೊಗಳಿಕೆಗಳು ಏನಾಗಿವೆ ಎಂದು ದೇವರು ಹೇಳಿದ್ದಾನೆ. **17**

**4:17** ಲೂಕ 12:47; ಯೋಹಾನ 9:41; 2 ಪೇತ್ರ 2:21. ತಾವು ಅಮಾಯಕರಾಗಿ ಮಾಡಿರುವ ರೀತಿಯಲ್ಲಿ ಅವರು ನಡೆದುಕೊಳ್ಳುತ್ತಾ ಇರಬಹುದು ಆದರೆ ಈಗ ಅವರಿಗೆ ಸರಿಯಾಗಿ ನಡೆದುಕೊಳ್ಳಬೇಕಾದ ರೀತಿ ಗೊತ್ತಾಗುತ್ತದೆ ಮತ್ತು ಯಾವುದೇ ಕಾರಣಗಳನ್ನು ಹೇಳಲು ಅವಕಾಶ ಇರುವದಿಲ್ಲ. ಪಾಪದಿಂದ ಕೆಟ್ಟತನವನ್ನು ಮಾಡುವದು ಮತ್ತು ಒಳ್ಳೆಯ ಕಾರ್ಯಗಳನ್ನು ಮಾಡದೆ ಬಿಡುವದು ಪಾಪವಾಗಿದೆ ಎಂಬದನ್ನು ಗಮನಿಸಿರಿ. ಸಂಖ್ಯಾ 32:23; 1 ಸಮು 12:23; ಮತ್ತಾಯ 25:41-46 ರೊಂದಿಗೆ ಹೋಲಿಸಿ ನೋಡಿರಿ.

# 5 1

**5:1** *"ಧನಿಕರೇ"*– ಯಾಕೋಬನು ಬಡವರನ್ನು ಕಡೆಗಣಿಸುವ ಮತ್ತು ಗಂಟುಗಳನ್ನು ಕೂಡಿಡುವ ಬಗ್ಗೆ ದೇವರು ಹೇಳಿರುವ ವಿಷಯಗಳ ಬಗ್ಗೆ ಚಿಂತಿಸದ ಸ್ವಾರ್ಥಚಿಂತಕರಾದ ಧನಿಕರ ಬಗ್ಗೆ ಮಾತನಾಡುತ್ತಾ ಇದ್ದಾನೆ (ಕೀರ್ತನೆ 37:16; 52:6-7; 62:10; ಜ್ಞಾನೋ 11:28; ಮತ್ತಾಯ 6:19-21; ಲೂಕ 12:16-21; 14:33; 1 ತಿಮೊ 6:6-10,17-19).

*"ನಿಮಗೆ ಬರುವ ದುರ್ದಶೆ"*– ಲೂಕ 6:24-25; 16:19-31. **3**

**5:3** *"ಮಣ್ಣು ಹಿಡಿದಿವೆ"*– ಯಾಕೋಬನು ಭೂತಕಾಲವನ್ನು ಉಪಯೋಗಿಸಿದ್ದಾನೆ, ಕಾರಣ ಈ ಐಶ್ವರ್ಯವು ಆಗಲೇ ಹಾಳಾಗಿದೆ ಎಂಬದನ್ನು ಸೂಚಿಸಲು ಅಲ್ಲ ಬದಲಾಗಿ ಅದು ಖಂಡಿತವಾಗಿಯೂ ನಡೆಯುತ್ತದೆ ಎಂಬದನ್ನು ದೃಢಪಡಿಸಲು. ಇದಲ್ಲದೆ ಅವನು ಲೋಕದ ಐಶ್ವರ್ಯವು ಕ್ರಮೇಣವಾಗಿ ವ್ಯರ್ಥವಾಗಿದೆ ಎಂಬದನ್ನು ತೋರಿಸುತ್ತಾ ಇದ್ದಾನೆ. ಆ ಐಶ್ವರ್ಯಗಳು ಏನೇ ಆಗಿದ್ದರೂ ನಾಶವಾಗುತ್ತವೆ ಮತ್ತು ಅವುಗಳು ಯಾರ ಬಳಿಯಲ್ಲಿದ್ದವೋ ಅವರನ್ನು ದೇವರ ಎದುರಿನಲ್ಲಿ ಬೆತ್ತಲೆಯಾಗಿ ನಿಲ್ಲಿಸುತ್ತವೆ. ಬಂಗಾರಕ್ಕೆ ಅಕ್ಷರಾರ್ಥವಾಗಿ ಮಣ್ಣು ಹಿಡಿಯುವದಿಲ್ಲ ಎಂಬದು ಯಾಕೋಬನಿಗೆ ಗೊತ್ತಿತ್ತು. ಅವನು

ಸರಳವಾದ ಭಾಷೆಯಲ್ಲಿ ಹೇಳುತ್ತಾ ಇರುವದೇನೆಂದರೆ ಅವರು ಪ್ರೀತಿಸಿರುವ ಮತ್ತು ಕೂಡಿಟ್ಟುಕೊಂಡಿರುವ ಯಾವುದೂ ಉಳಿಯುವದಿಲ್ಲ.

*"ದ್ರವ್ಯವನ್ನು ಕೂಡಿಸಿಟ್ಟುಕೊಂಡಿದ್ದೀರಿ"*– ಅನೇಕ ಜನರು ಬಡವರಾಗಿಯೂ, ದಿಕ್ಕಲ್ಲದವರಾಗಿಯೂ, ಹಸಿವೆಯಲ್ಲಿಯೂ ಲೋಕದಲ್ಲಿ ಸಾಯುತ್ತಾ ಇರುವಾಗ, ದ್ರವ್ಯವನ್ನು ಕೂಡಿಸಿಟ್ಟುಕೊಳ್ಳುವದು ದೊಡ್ಡ ಅಪರಾಧವಾಗಿದೆ. ಇದಲ್ಲದೆ ದೇವರು ಅವರ ಮೇಲೆ ಕಳುಹಿಸುವ ದುರ್ದೆಶೆಯಿಂದ ಬಹಳವಾಗಿ ನೊಂದುಕೊಳ್ಳುವರು (ವ 1). ದ್ರವ್ಯವನ್ನು ಕೂಡಿಸಿಟ್ಟುಕೊಳ್ಳುವದರಿಂದ ತಮಗೇ ತೊಂದರೆಯಾಯಿತು ಎಂದು ಅವರು ಅಂದುಕೊಳ್ಳುವರು. **4**

**5:4** *"ಕೂಲಿ ಕೆಲಸಗಾರರು"*– ಸತ್ಯವೇದವು ಬಡವರು, ದುಡಿಯುವವರು, ಕಡೆಗಣಿಸಲ್ಪಟ್ಟವರಿಗಾಗಿದೆ.

*"ಸಕಲಸೇನಾಧಿಪತಿಯಾಗಿರುವ ಕರ್ತನ ಕಿವಿಗಳು"*– ಉನ್ನತದಲ್ಲಿ ನೀತಿಯುಳ್ಳ ನ್ಯಾಯಾಧಿಪತಿಯಿದ್ದಾನೆ, ಆತನು ಐಶ್ವರ್ಯವಂತರಿಂದ ಕುಗ್ಗಿಸಲ್ಪಡುವ ಕೂಗುಗಳನ್ನು ಕೇಳಿಸಿಕೊಳ್ಳುತ್ತಾನೆ. **5**

**5:5** *"ಅತಿಭೋಗಿಗಳು"*– ಲೂಕ 16:19,25. ತಮಗೆ ಬೇಡವಾದವುಗಳನ್ನು ಅಲ್ಲಗಳೆಯುವವರ ಗತಿಯನ್ನು ಏನು ಹೇಳಲಿ. ಲೂಕ 9:23 ರೊಂದಿಗೆ ಹೋಲಿಸಿ ನೋಡಿರಿ.

*"ವಧೆಯ ದಿವಸ"*– ಅವರ ಅತಿಭೋಗ ಮತ್ತು ಕೊಬ್ಬಿದ ಜೀವನಗಳ ಅಂತ್ಯ ಮರಣವಾಗಿದೆ. ಯಾಕೋಬನು ಅವರನ್ನು ವಧಿಸಲೆಂದು ಸಿದ್ಧಮಾಡುವ ದನಗಳಿಗೆ ಹೋಲಿಸಿದ್ದಾನೆ (ಆಮೋಸ 4:1 ರೊಂದಿಗೆ ಹೋಲಿಸಿ ನೋಡಿರಿ). ಭೂಲೋಕದಲ್ಲಿ ನಾವಿರುವ ಕೆಲ ಸಮಯಗಳಲ್ಲಿ ಅತ್ಯಂತ ಪ್ರಾಮುಖ್ಯವಾದ ಕಾರ್ಯಗಳಾಗಿರುವ – ರಕ್ಷಣೆ, ಜ್ಞಾನ, ನೀತಿವಂತಿಕೆ, ಸತ್ಯ, ಪರಿಶುದ್ಧತೆಗಾಗಿ (ಮತ್ತಾಯ 6:33) ಜೀವಿಸುವದನ್ನು ಕಲಿತುಕೊಳ್ಳೋಣ. **6**

**5:6** ಹಣ ಅಥವಾ ಆಸ್ತಿಗಾಗಿ ಇಂದು ಇದ್ದು ನಾಳೆ ಇಲ್ಲದೆ ಹೋಗುವ ಮಾನವರು ದೇವರ ನಿಯಮವನ್ನು ಕೊಲ್ಲುವ ಅಥವಾ ತುಳಿಯುವ ಸಂಗತಿ ನಿಜವಾಗಿಯೂ ಆಶ್ಚರ್ಯ ಹಾಗೂ ಘೋರವಾದ ಸಂಗತಿಯಾಗಿದೆ. ನಿಜವಾಗಿಯೂ "ಅವರು ಬದುಕಿರುವ ತನಕ ಮರುಳುತನವು ಅವರ ಮನಸ್ಸನ್ನು ಹಿಡಿದಿರುವದು" (ಪ್ರಸಂಗಿ 9:3). **7**

**5:7** *"ಸಹೋದರರೇ"*– ಯಾಕೋಬನು ಐಶ್ವರ್ಯವಂತರ ವಿಷಯದಲ್ಲಿ ತನ್ನ ಮಾತುಗಳನ್ನು ಮುಗಿಸಿದ ನಂತರ ಮತ್ತೊಮ್ಮೆ ವಿಶ್ವಾಸಿಗಳೊಂದಿಗೆ ಮಾತನಾಡುತ್ತಾ ಇದ್ದಾನೆ. ಅವರು ದಬ್ಬಾಳಿಕೆ ಮತ್ತು ಕಷ್ಟಗಳನ್ನು ಎದುರಿಸುತ್ತಾ ಇದ್ದರೂ ತಾಳ್ಮೆಯುಳ್ಳವರಾಗಿರಬೇಕು (ರೋಮಾ 12:12; ಗಲಾ 5:22; ಕೊಲೊ 1:11; ಇಬ್ರಿ 6:12).

*"ಕರ್ತನು ಪ್ರತ್ಯಕ್ಷನಾಗುವ ಕಾಲ"*– ಮತ್ತಾಯ 16:27; ಯೋಹಾನ 14:3; ಅಪೊ 1:11. ರೈತರು ಪ್ರಕೃತಿಯಲ್ಲಿ ಸುಗ್ಗಿ ಕಾಲಕ್ಕಾಗಿ ದೇವರು ಕಾರ್ಯ ಮಾಡುವದನ್ನು ತಾಳ್ಮೆಯಿಂದ

ಎದುರುನೋಡುತ್ತಾ ಇರುತ್ತಾರೆ. ಆತ್ಮೀಕ ರಂಗದಲ್ಲಿಯೂ ದೇವರ ಯೋಜನೆಗಳು ನೆರವೇರುವ ಸಲುವಾಗಿ ವಿಶ್ವಾಸಿಗಳು ತಾಳ್ಮೆಯಿಂದ ಕಾಯಬೇಕು. **8**

**5:8** *"ದೃಢಪಡಿಸಿಕೊಳ್ಳಿರಿ"*– ಮತ್ತಾಯ 24:13; 1 ಕೊರಿಂಥ 15:58; 16:13; 2 ಕೊರಿಂಥ 1:21,24; ಎಫೆ 6:14; ಕೊಲೊ 1:23; 4:12; 1 ಪೇತ್ರ 5:9-10.

*"ಹತ್ತಿರವಾಯಿತು"*– ಎಷ್ಟು ಹತ್ತಿರವಾಯಿತು ಎಂದು ಅವನು ಹೇಳಿಲ್ಲ ಅಥವಾ ಯಾವುದೇ ಅಭಿಪ್ರಾಯವನ್ನೂ ತಿಳಿಸಿಲ್ಲ. ಹೊಸ ಒಡಂಬಡಿಕೆಯ ಯಾವ ಗ್ರಂಥಕರ್ತರಿಗೂ ಯೇಸು ಕ್ರಿಸ್ತನ ಎರಡನೇ ಬರೋಣದ ದಿನ ಗೊತ್ತಿಲ್ಲ. ಕೆಲವೊಮ್ಮೆ ಅವರು ಅದು ತಮ್ಮ ಜೀವಿತ ಕಾಲದಲ್ಲಿಯೇ ನಡೆಯುವದು ಎಂಬದಾಗಿ ನಂಬಿದ್ದರು (ಅಥವಾ ನಿರೀಕ್ಷಿಸಿದ್ದರು). ಆದರೆ ಯೋಹಾನ 21:18-23; 2 ತಿಮೊ 4:6 ನೋಡಿರಿ. ಪ್ರಕ 1:1-3 ರ ನೋಟ್ ನೋಡಿರಿ. **9**

**5:9** ಇತರರ ವಿಷಯದಲ್ಲಿ ಗುಣಗುಟ್ಟುವದು ಅವರ ಬಗ್ಗೆ ತೀರ್ಪು ಮಾಡುವದಕ್ಕೆ ಸಮಾನವಾಗಿದೆ, ಅದು ನಮ್ಮ ಕೆಲಸವಲ್ಲ (4:11-12).

*"ನ್ಯಾಯವಿಚಾರಣೆಗೆ ಗುರಿಯಾದೀರಿ"*– ಮತ್ತಾಯ 7:1-2.

*"ನ್ಯಾಯಾಧಿಪತಿ"*– ಕರ್ತನಾದ ಯೇಸು ಕ್ರಿಸ್ತನು (4:12 ರೊಂದಿಗೆ ಹೋಲಿಸಿ ನೋಡಿರಿ). ಆತನು ಯಾವಾಗಲೂ ಬಾಗಿಲ ಬಳಿಯಲ್ಲಿಯೇ ಇರುತ್ತಾನೆ. **10**

**5:10** ಆತನು ಅವರಿಗೆ ದೀರ್ಘಶಾಂತಿಯಿಂದಿರಿ ಎಂದು ಹೇಳಿದ್ದಾನೆ (ವ 7), ಈಗ ಆತನು ಅವರಿಗೆ ಹಳೆಯ ಒಡಂಬಡಿಕೆಯಲ್ಲಿ ತಾಳ್ಮೆಯಿಂದ ನಡೆದುಕೊಂಡವರ ಉದಾಹರಣೆಯನ್ನು ತೋರಿಸುತ್ತಾ ಇದ್ದಾನೆ. ಇಬ್ರಿ 11:35-39 ರಲ್ಲಿ ಅವರು ಅನುಭವಿಸಿದ ಕಾರ್ಯಗಳನ್ನು ಸಂಕ್ಷಿಪ್ತವಾಗಿ ನೋಡಿಕೊಳ್ಳಬಹುದು.

*"ಪ್ರವಾದಿಗಳು"*– ಆದಿ 20:7 ರ ನೋಟ್ಸ್ ನೋಡಿರಿ.

*"ಕರ್ತನ ಹೆಸರಿನಿಂದ"*– ವಿಮೋ 5:1; 1 ಅರಸು 17:1; 2 ಅರಸು 7:1; ಯೆಶಾಯ 1:10; ಯೆರೆ 1:9-10; 7:2; ಯೆಹೆಜ್ಕೇಲ 3:4; 13:2; ಹೋಶೇಯ 4:1; ಆಮೋಸ 1:3. **11**

**5:11** *"ತಾಳಿಕೊಳ್ಳುವವರು"*– 1:2-4. ಅವರ ಕಷ್ಟಗಳು ಅವರ ತಾಳ್ಮೆ ಹಾಗೂ ಸಹಿಸಿಕೊಳ್ಳುವಿಕೆಯನ್ನು ಹಾಳು ಮಾಡಲಿಲ್ಲ, ಬದಲಾಗಿ ಅವುಗಳನ್ನು ಹೆಚ್ಚಿಸಿದವು (ರೋಮಾ 5:3).

*"ಯೋಬ"*– ಯೋಬ 1:13—2:10.

*"ಅಂತ್ಯದಲ್ಲಿ"*– ಯೋಬ 42:10-17.

*"ಕರುಣಾಸಾಗರನೂ ದಯಾಳುವೂ"*– ವಿಮೋ 34:6-7; ಕೀರ್ತನೆ 5:7; 25:6; 103:13; 116:5. ದೇವರು ನಾವು ಸಹಿಸಿಕೊಳ್ಳಲು ಆಗದೆ ಇರುವದನ್ನು ಎಂದಿಗೂ ನಮ್ಮ ಮೇಲೆ ಹಾಕುವದಿಲ್ಲ, ಮತ್ತು ನಾವು ಅನುಭವಿಸುವ ಶ್ರಮೆಗಳನ್ನೆಲ್ಲಾ ನಮ್ಮ ಹಿತಕ್ಕಾಗಿಯೇ

ಮಾರ್ಪಡಿಸುತ್ತಾನೆ (ರೋಮಾ 8:28). **12**

**5:12** ಮತ್ತಾಯ 5:33-37. ನಾವು ಹೇಳುವ ಪ್ರತಿಯೊಂದು ಮಾತುಗಳನ್ನು ದೇವರೇ ಕೇಳಿಸಿಕೊಳ್ಳುತ್ತಾ ಇದ್ದಾನೆ ಎಂಬ ಆಲೋಚನೆಯೊಂದಿಗೆ ನಾವು ಮಾತನಾಡಬೇಕು. ಆತನು ನಿಜವಾಗಿಯೂ ಕೇಳಿಸಿಕೊಳ್ಳುವವನಾಗಿದ್ದಾನೆ. ಆದ್ದರಿಂದ ಯಾರನ್ನೂ ವಂಚಿಸುವ ಪ್ರಯತ್ನವನ್ನು ನಾವು ಮಾಡಬಾರದು. **13-14**

**5:13-14** ಅವನು ಸೂಚಿಸಿರುವ ಮೂರು ಪರಿಸ್ಥಿತಿಗಳು ವಿಶ್ವಾಸಿಗಳ ಜೀವಿತದ ಬಹುತೇಕ ಭಾಗಗಳನ್ನು ಒಳಗೊಂಡಿದೆ. **13**

**5:13** "*ಬಾಧೆಗಳು*"– ಗ್ರೀಕ್ ಪದದ ಅರ್ಥ ಶ್ರಮೆ ಅನುಭವಿಸುವದು ಅಥವಾ ಕಷ್ಟಗಳನ್ನು ಸಹಿಸಿಕೊಳ್ಳುವದು (2 ತಿಮೊ 2:3; 4:5). ಇದು ಬಹುತೇಕ ಎಲ್ಲಾ ವಿಶ್ವಾಸಿಗಳಲ್ಲಿರುವ ಸಾಮಾನ್ಯ ಸಂಗತಿಯಾಗಿದೆ (ಅಪೊ 14:22).

"*ಪ್ರಾರ್ಥನೆ*"– ಪ್ರಾರ್ಥನೆಗೆ ಉತ್ತರವಾಗಿ ದೇವರು ನಮ್ಮನ್ನು ಬಾಧೆಗಳಿಂದ ಬಿಡಿಸುತ್ತಾನೆ ಅಥವಾ ಅವುಗಳನ್ನು ತಾಳ್ಮೆಯಿಂದ ಸಹಿಸಿಕೊಳ್ಳಲು ನಮಗೆ ಸಂತೈಸುವಿಕೆ ಮತ್ತು ಬಲವನ್ನು ಕೊಡುತ್ತಾನೆ. ನಾವು ಬಾಧೆಗಳಲ್ಲಿರುವಾಗ ಮಾತ್ರವೇ ಪ್ರಾರ್ಥನೆ ಮಾಡಬೇಕೆಂದು ಯಾಕೋಬನು ನಮಗೆ ಕಲಿಸುತ್ತಾ ಇದ್ದಾನೆ ಎಂದು ನಾವು ನೆನೆಸಬಾರದು (ಎಫೆ 6:18; 1 ಥೆಸ 5:17 ರೊಂದಿಗೆ ಹೋಲಿಸಿ ನೋಡಿರಿ).

"*ಸಂತೋಷ*"– ವಿಶ್ವಾಸಿಗಳು ತಮ್ಮ ಬಾಧೆಗಳಿಂದ ಉಪಶಮನವನ್ನು ಅನುಭವಿಸುವ, ಯಾವುದೇ ಭಾರ ಇಲ್ಲದಿರುವ ಸ್ಥಿತಿಗೆ ಬರುವ ಮತ್ತು ಸಂತೋಷಭರಿತರಾಗುವ ಸಮಯಗಳಿರುತ್ತವೆ – ದೇವರಿಗೆ ಸ್ತುತಿಸ್ತೋತ್ರಗಳನ್ನು ಸಲ್ಲಿಸುವ ಒಳ್ಳೆಯ ಸಮಯಗಳು ಬರುತ್ತವೆ (ಕೀರ್ತನೆ 9:13-14; 18:49; 35:28; 47:6; 51:14-15). ದೇವರನ್ನು ಸ್ತುತಿಸಲು ಎಲ್ಲಾ ಸಮಯಗಳು ಒಳ್ಳೆಯ ಸಮಯಗಳೇ ಆಗಿವೆ (1 ಥೆಸ 5:18), ಆದರೆ ಇನ್ನೂ ಉತ್ತಮವಾಗಿ ನಾವು ಆತನನ್ನು ಸ್ತುತಿಸುವ ಸಮಯಗಳೂ ಇರುತ್ತವೆ ಎಂಬದರಲ್ಲಿ ಯಾವುದೇ ಸಂದೇಹವೂ ಬೇಡ. **14**

**5:14** ಅನಾರೋಗ್ಯದ ಸಮಯಗಳು ಮಾನವರಲ್ಲಿ ಅತ್ಯಂತ ಸಹಜವಾದ ಸಮಯಗಳಾಗಿವೆ ಮತ್ತು ಯೇಸು ಕ್ರಿಸ್ತನಲ್ಲಿರುವ ವಿಶ್ವಾಸಿಗಳಿಗೂ ಆ ಸಮಯಗಳು ಎದುರಾಗುತ್ತವೆ. ನಾವು ಅನಾರೋಗ್ಯದಲ್ಲಿರುವಾಗ ಏನು ಮಾಡಬೇಕು ಎಂಬದನ್ನು ಯಾಕೋಬನು ನಮಗೆ ಹೇಳಿದ್ದಾನೆ. ತನ್ನ ಜನರ ಸ್ವಸ್ಥತೆಗಾಗಿ ದೇವರೇ ಈ ಕಾರ್ಯವನ್ನು ಏರ್ಪಡಿಸಿದ್ದಾನೆ. ಕೆಲವು ವಿಶ್ವಾಸಿಗಳು ಮಾತ್ರವೇ ಅದಕ್ಕೆ ತಮ್ಮನ್ನು ಒಪ್ಪಿಸಿಕೊಡಲು ಮುಂದಾಗುವದು ನಿಜವಾಗಿಯೂ ಆಶ್ಚರ್ಯಕರವಾದ ಸಂಗತಿಯಾಗಿದೆ. ಅವನು ಇಲ್ಲಿ ಹೇಳಿರುವದು ಸತ್ಯವೇದವನ್ನು ನಂಬುವ ಸಭೆಗಳಲ್ಲಿ ಸಾಮಾನ್ಯವಾದ ಅಭ್ಯಾಸವಾಗಿರಬೇಕು.

"*ಕರ್ತನ ಹೆಸರಿನಲ್ಲಿ*"– ಅವರ ಶಕ್ತಿ ಅಥವಾ ಅವರ ಮಾತುಗಳ ಶಕ್ತಿ ಅಥವಾ ಎಣ್ಣೆ

ಅನಾರೋಗ್ಯದಲ್ಲಿರುವದನ್ನು ಗುಣಪಡಿಸುವದಿಲ್ಲ ಎಂಬದನ್ನು ಎಲ್ಲರೂ ತಿಳಿದುಕೊಳ್ಳಬೇಕು. ಕರ್ತನು ಗುಣಪಡಿಸುವಾತನಾಗಿದ್ದಾನೆ. ಆತನ ಹೆಸರಿನಲ್ಲಿ ನಮಗೆ ಅದು ದೊರೆಯುತ್ತದೆ – ವಿಮೋ 15:26. **15**

**5:15** ದೇವರು ತನ್ನ ಸೇವಕರು ಅನಾರೋಗ್ಯಕ್ಕೆ ಒಳಗಾಗುವಾಗ ಅವರನ್ನು ಗುಣಪಡಿಸಲು ಕೂಡಲೇ ಯಾವಾಗಲೂ ಮುಂದಾಗುವದಿಲ್ಲ ಎಂಬದು ಸ್ಪಷ್ಟವಾದ ಸಂಗತಿಯಾಗಿದೆ (ಫಿಲಿಪ್ಪಿ 2:26-27; 1 ತಿಮೊ 5:23; 2 ತಿಮೊ 4:20). ಇಂಥ ಪರಿಸ್ಥಿತಿಯಲ್ಲಿ ಒಮ್ಮೆಲೇ ಅವರಿಗೆ ಗುಣವಾಗಲಿ ಎಂದು ನಂಬಿಕೆಯಿಂದ ಪ್ರಾರ್ಥನೆ ಮಾಡಲು ಆಗುವದಿಲ್ಲ. ಯಾರಾದರೂ ಸಭೆಯ ಹಿರಿಯರನ್ನು ಕರೆಸಿದರೆ ಮತ್ತು ಆ ವ್ಯಕ್ತಿಯನ್ನು ಗುಣಪಡಿಸುವ ಆಯ್ಕೆಯನ್ನು ದೇವರು ಮಾಡಿದರೆ, ಆತನು ಹಿರಿಯರಲ್ಲಿ ಒಬ್ಬರಿಗೆ ಅಥವಾ ಇಬ್ಬರಿಗೆ ನಂಬಿಕೆಯನ್ನು ಕೊಡುತ್ತಾನೆ ನಂತರ ಅನಾರೋಗ್ಯದಲ್ಲಿರುವ ವ್ಯಕ್ತಿಯನ್ನು ಗುಣಪಡಿಸುತ್ತಾನೆ.

*“ಪಾಪ ಮಾಡಿದವನಾಗಿದ್ದರೆ”*– ಕೆಲವು ಪರಿಸ್ಥಿತಿಗಳಲ್ಲಿ ಒಬ್ಬ ವ್ಯಕ್ತಿಯ ಅನಾರೋಗ್ಯಕ್ಕೆ ಅವನ ಪಾಪವು ಕಾರಣವಾಗಿರಬಹುದು ಎಂಬದಾಗಿ ಯಾಕೋಬನು ಹೇಳುತ್ತಾ ಇದ್ದಾನೆ. 1 ಕೊರಿಂಥ 11:30 ರೊಂದಿಗೆ ಹೋಲಿಸಿ ನೋಡಿರಿ – ಕೆಲವು ಪಾಪಗಳನ್ನು ದೇವರು ಶಿಕ್ಷಿಸುವದರ ಫಲಿತಾಂಶವಾಗಿ ಬಲಹೀನತೆಗಳು ಮತ್ತು ಅನಾರೋಗ್ಯಗಳು ಕಾಣಿಸಿಕೊಳ್ಳುತ್ತವೆ ಎಂದು ಈ ವಚನವು ಹೇಳುತ್ತದೆ.

*“ಪರಿಹಾರವಾಗುವದು”*– ಅವನನ್ನು ಎಬ್ಬಿಸುವ ಕರ್ತನು, ಅವನನ್ನು ಅನಾರೋಗ್ಯಕ್ಕೆ ಒಳಪಡಿಸಿದ ಪಾಪಗಳನ್ನು ಪರಿಹರಿಸುವನು. **16**

**5:16** *“ಅರಿಕೆ ಮಾಡಿಕೊಳ್ಳುವದು”*– ಇಲ್ಲಿ ಅವನು ಯಾಜಕನಿಗೆ ಅರಿಕೆ ಮಾಡಬೇಕು ಎಂದು ಹೇಳುತ್ತಿಲ್ಲ ಬದಲಾಗಿ ಒಬ್ಬರಿಗೊಬ್ಬರು ಅರಿಕೆ ಮಾಡಿಕೊಳ್ಳಬೇಕು ಎಂದು ಹೇಳುತ್ತಾ ಇದ್ದಾನೆ. ವಿಶೇಷವಾಗಿ ವಿಶ್ವಾಸಿಗಳಲ್ಲಿ ಯಾರಾದರೂ ಅನಾರೋಗ್ಯಕ್ಕೆ ಒಳಗಾದರೆ ಸಹಜವಾಗಿ ಅವರು ಆರಾಧನೆ ಮಾಡುವ ಸಮಯದಲ್ಲಿ ಈ ಅಭ್ಯಾಸವನ್ನು ತಪ್ಪದೆ ಮಾಡಬೇಕು. ನಿಷ್ಕಪಟತನ ಮತ್ತು ಪ್ರೀತಿ, ತಿಳುವಳಿಕೆ ಮತ್ತು ಅಂಗೀಕಾರ ಇದ್ದರೆ ಮಾತ್ರವೇ ಇದು ಸಾಧ್ಯವಾಗುತ್ತದೆ. (ಹೊಸ ಒಡಂಬಡಿಕೆಯ ಪ್ರಕಾರ ವಿಶ್ವಾಸಿಗಳೆಲ್ಲರೂ ಯಾಜಕರಾಗಿದ್ದಾರೆ – 1 ಪೇತ್ರ 2:5,9). ಪ್ರಾರ್ಥನೆ ದುರ್ಬಲ ಮತ್ತು ಪರಿಣಾಮಕಾರಿಯಲ್ಲದ ವಿಷಯ ಎಂದು ನಾವು ಎಂದಿಗೂ ತಿಳಿದುಕೊಳ್ಳಬಾರದು. ಒಂದುವೇಳೆ ನಾವು ನೀತಿವಂತರಾಗಿದ್ದರೆ ಅದು ಅತ್ಯಂತ ಪರಿಣಾಮಕಾರಿಯಾಗಿರುತ್ತದೆ.

*“ನೀತಿವಂತನು”*– ಇದರ ಅರ್ಥ ದೇವರೊಂದಿಗೆ ಸರಿಯಾದ ಸಂಬಂಧವುಳ್ಳವನು, ದೇವರ ಮಾರ್ಗದನುಸಾರ ನಡೆಯುವವನು. ಒಂದುವೇಳೆ ನಾವು ದೇವರೊಂದಿಗೆ ಸರಿಯಾದ ಸಂಬಂಧವುಳ್ಳವರಾಗಿರಬೇಕೆಂದರೆ ಆತನು ನಮ್ಮನ್ನು ನೀತಿವಂತರೆಂದು ಎಣಿಸಬೇಕು

(ರೋಮಾ 1:17; 3:21-26; 5:1 ರ ನೋಟ್ಸ್ ನೋಡಿರಿ), ಮತ್ತು ನಾವು ದೇವರ ವಾಕ್ಯ ಹಾಗೂ ಚಿತ್ತಕ್ಕೆ ವಿಧೇಯರಾಗಿ ನೀತಿಯ ಜೀವಿತವನ್ನು ಜೀವಿಸಬೇಕು (ಕೀರ್ತನೆ 66:18; ಜ್ಞಾನೋ 15:29; ಯೆಶಾಯ 1:15; ಯೋಹಾನ 9:31). ಒಂದುವೇಳೆ ಈ ಎರಡು ಕಾರ್ಯಗಳು ನಮ್ಮ ವಿಷಯದಲ್ಲಿ ಸತ್ಯವಾಗಿದ್ದರೆ, ಆಗ ನಾವು ಶಕ್ತವಾದ ಸಾಧನವಾಗಿರುವ ಪ್ರಾರ್ಥನೆಯನ್ನು ಒಳ್ಳೆಯ ಕಾರ್ಯಕ್ಕಾಗಿ ಉಪಯೋಗಿಸಬಹುದು. 1 ಥೆಸ 5:17 ರ ವಚನಗಳನ್ನು ನೋಡಿರಿ.

*"ಬಹು ಬಲವಾಗಿದೆ"*– ಅಥವಾ "ಶಕ್ತಿಯುತವಾಗಿದೆ", ಅಥವಾ "ಅಧಿಕ ಕಾರ್ಯಗಳನ್ನು ಸಾಧಿಸಲು ಶಕ್ತವಾಗಿದೆ". ಗ್ರೀಕ್ ನಾಮಪದವು ಕ್ರಿಯಾಪದದ ಸಂಬಂಧವಾಗಿ ಇಲ್ಲಿ ಕೊಡುವ ಅರ್ಥವೇನೆಂದರೆ "ಬಲ", "ಶಕ್ತಿ", "ಸಾಮರ್ಥ್ಯ". ನೀತಿವಂತರ ಪ್ರಾರ್ಥನೆಗಳು ದೇವರಿಗೆ ತಲುಪುತ್ತವೆ, ಲೋಕದಲ್ಲಿ ಬಹು ಬಲವಾದವುಗಳಾಗಿವೆ ಮತ್ತು ದೊಡ್ಡ ಕಾರ್ಯಗಳನ್ನು ಸಾಧಿಸುತ್ತವೆ. **17-18**

**5:17-18** ಇಲ್ಲಿ ಪ್ರಾರ್ಥನೆಯ ಬಲದ ಉದಾಹರಣೆಗಳನ್ನು ನೋಡಬಹುದು. 1 ಅರಸು 17:1; 18:41-46 ನೋಡಿರಿ. ಪ್ರಾರ್ಥನಾ ಬಲದ ಬಗ್ಗೆ ಸತ್ಯವೇದದಲ್ಲಿ ಅನೇಕ ಉದಾಹರಣೆಗಳಿವೆ – ಆದಿ 20:17; 25:21; ವಿಮೋ 8:30-31; 10:18-19; ಸಂಖ್ಯಾ 11:2; ಧರ್ಮೋ 9:20,25-29; 2 ಸಮು 15:31; 17:14,23; 2 ಅರಸು 4:32-35; ಯೋಬ 42:10; ಕೀರ್ತನೆ 18:6-24; ದಾನಿ 9:4,20-23; ಯೋನ 2:1,10; ಲೂಕ 9:29; 22:31-32; ಯೋಹಾನ 11:41-44; ಅಪೊ 4:31; 9:40. **17**

**5:17** *"ನಮ್ಮಂಥ ಸ್ವಭಾವದವನು"*– ಎಲೀಯ ಸೂಪರ್ ಮ್ಯಾನ್ ಆಗಿರಲಿಲ್ಲ. ನಮ್ಮ ಹಾಗೆಯೇ ಅವನು ಮಾಂಸ ಮತ್ತು ರಕ್ತವುಳ್ಳವನಾಗಿದ್ದನು. ನಮಗಿರುವ ಹಾಗೆಯೇ ಅವನೂ ಪಾಪದ ಸ್ವಭಾವದವನಾಗಿದ್ದನು. ನಮ್ಮ ಹಾಗೆಯೇ ಅವನೂ ಶೋಧನೆಗೆ ಒಳಗಾದನು, ಪರೀಕ್ಷೆಗಳನ್ನು ಎದುರಿಸಿದನು. ಅವನ ಶಕ್ತಿ ಅವನಲ್ಲಿರಲಿಲ್ಲ ಬದಲಾಗಿ ಅವನು ಸೇವಿಸುತ್ತಾ ಇದ್ದ ದೇವರಲ್ಲಿತ್ತು. ದೇವರು ಕೊಟ್ಟಿರುವ ಅದ್ಭುತವಾದ ಸಾಧನವನ್ನು (ಪ್ರಾರ್ಥನೆಯನ್ನು) ಅವನು ಪರಿಣಾಮಕಾರಿಯಾಗಿ ಉಪಯೋಗಿಸಿದನೆಂದರೆ, ನಮ್ಮಿಂದಲೂ ಅದು ಸಾಧ್ಯ – ಆದರೆ ಆತನು ನೀತಿವಂತನಾಗಿದ್ದ ಹಾಗೆ ನಾವೂ ನೀತಿವಂತರಾಗಿರಬೇಕು. **19**

**5:19** *"ಸಹೋದರರೇ"*– ಅವನು ಕ್ರೈಸ್ತರೆಂದು ಕರೆಯಲ್ಪಡುವ ದೊಡ್ಡ ಗುಂಪಿನ ಜನರಿಗೆ ಹೇಳುತ್ತಾ ಇದ್ದಾನೆ. ಅವರೆಲ್ಲರೂ ಯೇಸು ಕ್ರಿಸ್ತನಲ್ಲಿ ನಿಜವಾದ ವಿಶ್ವಾಸಿಗಳಾಗಿದ್ದರು ಅಥವಾ ಅವರು ನಿಜವಾದ ವಿಶ್ವಾಸಿಗಳೆಂದು ಯಾಕೋಬನು ಅಂದುಕೊಂಡಿದ್ದನು ಎಂದು ಊಹೆ ಮಾಡಲು ನಮ್ಮಿಂದ ಆಗುವದಿಲ್ಲ. ಬಹುತೇಕ ಕ್ರೈಸ್ತರ ದೊಡ್ಡ ಗುಂಪುಗಳಲ್ಲಿ ವಿವಿಧ ಬಗೆಯ ಜನರಿರುತ್ತಾರೆ – ಕೆಲವರು ರಕ್ಷಣೆ ಹೊಂದಿರುತ್ತಾರೆ, ಕೆಲವರು ಹೊಂದಿರುವದಿಲ್ಲ; ಕೆಲವರು ಸತ್ಯವನ್ನು ಅನುಸರಿಸುವವರಾಗಿರುತ್ತಾರೆ, ಕೆಲವರು

ಅನುಸರಿಸುವವರಾಗಿರುವದಿಲ್ಲ. ಅಂಥ ಗುಂಪುಗಳಲ್ಲಿ ಕೆಲವರು ಸತ್ಯವನ್ನು ಸಂಪೂರ್ಣವಾಗಿ ಅಲ್ಲಗಳೆಯುವ ಸಾಧ್ಯತೆಗಳು ಅಧಿಕವಾಗಿರುತ್ತವೆ (1 ತಿಮೊ 1:6; 6:10,21; 2 ತಿಮೊ 2:18; 2 ಪೇತ್ರ 2:15). ಅಂಥ ಪಾಪಿಗಳನ್ನು ಪುನಃ ಸತ್ಯದ ಕಡೆಗೆ ನಡೆಸುವದು ಬಹಳ ಕಷ್ಟ, ಆದರೆ ಯಾಕೋಬನು ಅದು ಸಾಧ್ಯ ಎಂದು ಹೇಳುತ್ತಾ ಇದ್ದಾನೆ. **20**

**5:20** “*ಮರಣ*”– ಆತ್ಮೀಕ ಮರಣ, ದೇವರಿಂದ ಬೇರ್ಪಡುವದು (ಯೋಹಾನ 5:24; ಎಫೆ 2:1). ಯಾರನ್ನಾದರೂ ಇದರಿಂದ ಬಿಡಿಸುವದು ನಿಜವಾಗಿಯೂ ದೊಡ್ಡ ಕಾರ್ಯವಾಗಿದೆ. ಇದು ಸಾಧ್ಯವಾಗುವಾಗ ಕಾಪಾಡಲ್ಪಡುವ ಪಾಪಿಯ ಎಲ್ಲಾ ಪಾಪಗಳು ದೇವರ ದೃಷ್ಟಿಯಿಂದ ಶಾಶ್ವತವಾಗಿ ಮರೆಯಾಗುತ್ತವೆ (ಕೀರ್ತನೆ 103:12; ಮೀಕ 7:19).